ಲೋಕಹಿತಂ ಮಮ ಕರಣೀಯಂ

# ಸೇವಾ ದಿಶಾ

ಹಿಂದು ಸೇವಾ ಪ್ರತಿಷ್ಠಾನದ ವಾರ್ತಾಪತ್ರಿಕೆ

ಸಂಪುಟ : 5 ಸಂಚಿಕೆ : 1 ಆಕ್ಟೋಬರ್ –2009 ಪುಟಗಳು : 8 ಬೆಲೆ : 5–00

## ದೊರಕಿತು ಇಲ್ಲಿ ಸೇವೆಯ ಅರ್ಥ

- ಶ್ರೀಮತಿ ಗೀತಾದೇವಿ

**ಬೆಂಗಳೂರು:** ಈ ವರ್ಷದ ಮಹಿಳಾ ಸೇವಾವ್ರತಿ ತರಬೇತಿ ಶಿಬಿರದ ಉದ್ಘಾಟನಾ ಕಾರ್ಯಕ್ರಮ ಅಕ್ಟೋಬರ್ 1 ರಂದು ಯಲಹಂಕ ಉಪನಗರದ ನಿವೇದಿತಾ ಪ್ರಶಿಕ್ಷಣ ಕೇಂದ್ರದಲ್ಲಿ ನಡೆಯಿತು. ಇದು ಪ್ರತಿಷ್ಠಾನದ 31ನೆಯ ಮಹಿಳಾ ಸೇವಾವ್ರತಿ ತರಬೇತಿ ಶಿಬಿರ.

ಮುಖ್ಯಭಾಷಣಕಾರರಾಗಿದ್ದ ಪ್ರತಿಷ್ಠಾನದ ಸಂಚಾಲಕರಾದ ಶ್ರೀ ಶ್ರೀಪಾದರವರು ಮಾತನಾಡಿ ಸರ್. ಎಂ. ವಿಶ್ವೇಶ್ವರಯ್ಯನವರು ಜೋಗ ಜಲಪಾತವನ್ನು ನೋಡಿ ಎಷ್ಟೊಂದು ಶಕ್ತಿ ಸುಮ್ಮನೆ ವ್ಯರ್ಥವಾಗುತ್ತಿದೆ ಎಂದು ಯೋಚಿಸಿ, ವಿದ್ಯುತ್ ಉತ್ಪಾದನೆ ಪ್ರಾರಂಭಿಸಿದರು. ಹಾಗೆಯೇ ದಿ। ಅಜಿತಕುಮಾರರು ನಮ್ಮಲ್ಲಿನ ಯುವಶಕ್ತಿಯ ಸದುಪಯೋಗ ಮಾಡುವುದಕ್ಕಾಗಿ ಹಿಂದು ಸೇವಾ ಪ್ರತಿಷ್ಠಾನವನ್ನು ಪ್ರಾರಂಭಿಸಿದರು ಎಂದು ಹೇಳಿದರು. 1980ರಲ್ಲಿ 23 ಜನ ಸೇವಾವ್ರತಿಗಳಿಂದ ಪ್ರಾರಂಭವಾದ ಪ್ರತಿಷ್ಠಾನ ಇಂದು ಪ್ರತೀವರ್ಷವೂ ನೂರಕ್ಕೂ ಮೇಲ್ಪಟ್ಟು ಸೇವಾವ್ರತಿಗಳಿಗೆ ತರಬೇತಿ ನೀಡುತ್ತಿದೆ. ಹೆಣ್ಣುಮಕ್ಕಳು ಅಡುಗೆ ಮನೆಗೆ ಮಾತ್ರ ಸೀಮಿತವಲ್ಲ, ಹೊರಗೆ ಬಂದು ಓಡಾಡಿ ಸೇವೆಯ ಮೂಲಕ ಸಮಾಜ ಪರಿವರ್ತನೆಯನ್ನೂ ಮಾಡಬಲ್ಲರು ಎನ್ನುವುದನ್ನು ತೋರಿಸಿಕೊಟ್ಟಿದೆ ಎಂದರು.

"ಆತ್ಮದೀಪೋ ಭವ" ಅಂದರೆ ತನಗೆ ತಾನೇ ದಾರಿದೀಪವಾಗು ಎಂದು ಭಗವಾನ್ ಗೌತಮ ಬುದ್ಧ ಹೇಳಿದ. ಹಾಗೆಯೇ ಪ್ರತಿಷ್ಠಾನವು ಸೇವಾವ್ರತಿಗಳಿಗೆ ಸ್ವಾವಲಂಬನೆ ಮತ್ತು ಸ್ವಾಭಿಮಾನದ ಶಿಕ್ಷಣವನ್ನು ನೀಡುತ್ತಿದೆ. ಕೇವಲ ತನಗೆ ತಾನು ದಾರಿದೀಪವಾಗುವುದಲ್ಲದೇ, ಬೇರೆಯ ವರಿಗೂ ದಾರಿದೀಪವಾಗ ಬೇಕೆನ್ನುವ ಚಿಂತನೆ ಇಲ್ಲಿ ಇದೆ ಎಂದು ಹೇಳಿದರು. ಬೇರೆಯ ವರಿಗೋಸ್ಕರ ಬದುಕುವವರು ಚಿರಂಜೀವಿಗಳಾಗುತ್ತಾರೆ ಎನ್ನುತ್ತಾ ಶ್ರೀರಾಮನಿಗೋಸ್ಕರ ಬದುಕಿದ ಹನುಮಂತ ಚಿರಂಜೀವಿಯಾದ ಎಂದು ಉದಾಹರಣೆ ನೀಡಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿದ್ದ ಲಾನ್ ಮೂವರ್ಸ್‌ನ ಮಾಲಿಕರಾದ ಶ್ರೀಮತಿ ಗೀತಾದೇವಿಯವರು ಮಾತನಾಡಿ ಸೇವೆಯೆಂಬ ವ್ರತವನ್ನು ಕೈಗೊಂಡು ಬೇರೆಯವರ ನೋವಿಗೆ ಸ್ಪಂದಿಸುವ ಸೇವಾವ್ರತಿಗಳು ನಿಜವಾಗಿಯೂ ಭಾಗ್ಯವಂತರು ಎಂದು ಹೇಳಿದರು. ಸೇವಾವ್ರತಿಗಳಿಗೆ ಮಾತ್ರವಲ್ಲದೇ ಪ್ರತಿಯೊಬ್ಬರೂ ತಮ್ಮ ತಮ್ಮ ವ್ಯವಹಾರದಲ್ಲಿಯೂ ಸೇವಾ ಮನೋಭಾವನೆಯನ್ನು ಬೆಳೆಸಿಕೊಂಡಾಗ ಯಶಸ್ವೀ ಮತ್ತು ಸಾರ್ಥಕ ಜೀವನ ಸಾಧ್ಯ ಎಂದು ಹೇಳಿದರು. ಸಮಾಜ ಸೇವೆಯ ಕಾರ್ಯವನ್ನು ತಾನು ಬಹಳ ಕಾಲದಿಂದ ನೋಡುತ್ತಾ, ಸ್ವತಃ ಮಾಡುತ್ತಾ ಬಂದಿದ್ದರೂ, ಪ್ರತಿಷ್ಠಾನದ ಸೇವಾಕಾರ್ಯಗಳ ಬಗ್ಗೆ ಕೇಳಿದ ಮೇಲೆ ಸೇವೆಯ ನಿಜವಾದ ಅರ್ಥ ಇನ್ನೂ ಸ್ಪಷ್ಟವಾಗಿ ತಿಳಿಯಿತು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷರಾಗಿದ್ದ ಎಂ. ವಿ. ಎಂ. ಇನ್ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸ್‌ನ ಶ್ರೀಮತಿ ಮಂಗಳ ಭಾರತಿಯವರು ಮಾತನಾಡಿ ಸಮಾಜಸೇವೆ ನಮ್ಮ ಎಲ್ಲಾ ಕೆಲಸಗಳ ಅಡಿಪಾಯದಂತಿರಬೇಕು. ಸಮಾಜ ನಮಗೆ ಎಲ್ಲವನ್ನೂ ಕೊಟ್ಟಿದೆ. ನಾವು ಸಮಾಜಕ್ಕೆ ಹಿಂತಿರುಗಿ ಕೊಡುವುದು ನಮ್ಮ ಕರ್ತವ್ಯ ಎಂದು ಹೇಳಿದರು. ಯಾರು ಬೇರೆಯವರ ನೋವನ್ನು ನಿವಾರಣೆ ಮಾಡುತ್ತಾರೋ ಅವರೇ ದೇವರು ಎಂದರು.

ಕಾರ್ಯಕ್ರಮದಲ್ಲಿ ಪ್ರತಿಷ್ಠಾನದ ನಿರ್ದೇಶಕರಾದ ಶ್ರೀ ಶ್ರೀಧರ ಸಾಗರರವರು, ಸಂಚಾಲಕರಾದ ಶ್ರೀ ಕೃಷ್ಣಮೂರ್ತಿಯವರು, ಪ್ರತಿಷ್ಠಾನದ ವಿಶ್ವಸ್ತರು ಮತ್ತು ಅನೇಕ ಸಜ್ಜನ ಬಂಧುಗಳು ಉಪಸ್ಥಿತರಿದ್ದರು.

## ಸೇವಾ ಬಸ್ತಿ ಮಕ್ಕಳಿಗೆ ಪುಸ್ತಕಸಾಮಗ್ರಿಗಳ ವಿತರಣೆ

**ಹುಬ್ಬಳ್ಳಿ :** ಸೇವಾ ಭಾರತಿ ಟ್ರಸ್ಟ್ ಆಶ್ರಯದಲ್ಲಿ ವಿದ್ಯಾವಿಕಾಸ ಯೋಜನೆಯಲ್ಲಿಯ ಮಕ್ಕಳಿಗೆ ಬಟ್ಟೆ ನೋಟ್‌ಬುಕ್, ಕಂಪಾಸ್ ಇತ್ಯಾದಿ ವಸ್ತುಗಳ ವಿತರಣಾ ಕಾರ್ಯಕ್ರಮ ಗಂಗಾಧರ ನಗರದ ಸಮುದಾಯ ಭವನದಲ್ಲಿ ದಿ.22.09.09ರಂದು ನಡೆಯಿತು.

ಈ ಸಮಾರಂಭದಲ್ಲಿ ಟ್ರಸ್ಟಿನ ವಿಶ್ವಸ್ತರಾದ ಡಾ. ರಘು ಅಕ್ಮಂಚಿ ಅವರು 30 ಮಕ್ಕಳಿಗೆ ಬಟ್ಟೆ ವಿತರಣೆ ಮಾಡಿ ಮಾತನಾಡುತ್ತಾ, ವಿದ್ಯಾವಿಕಾಸ ಯೋಜನೆ ಅಂದರೆ ಹಿಂದುಳಿದ ಪ್ರದೇಶದ ಮಕ್ಕಳು ಓದಿನಲ್ಲಿ ಹಿಂದೆ ಬೀಳಬಾರದು ಅದಕ್ಕೆ ಅವರಿಗೆ ಪ್ರತಿದಿನ ಗಣಿತ ಇಂಗ್ಲಿಷ್ ಪಠ್ಯದಲ್ಲಿ ಮನೆಪಾಠ ಮಾಡುವುದರ ಮುಖಾಂತರ ಈ ಮಕ್ಕಳು ಸಹಿತ ಉಳಿದ ಮಕ್ಕಳ ಜೊತೆ ಸರಿಸಮಾನರಾಗಿ ಶಿಕ್ಷಣದಲ್ಲಿ ಮುಂದುವರೆಯಬೇಕೆಂದು ಅಭಿಪ್ರಾಯಪಟ್ಟರು.

ಈ ಕಾರ್ಯಕ್ರಮಕ್ಕೆ ಅತಿಥಿಯಾಗಿ ಬಂದ ಯಮನೂರ ಬೂದಿಹಾಳ ಇವರು ಹಿತವಚನ ನೀಡಿದರು. ಕಾರ್ಯಕ್ರಮ ಮಕ್ಕಳ ಪ್ರಾರ್ಥನೆಯೊಂದಿಗೆ ಪ್ರಾರಂಭವಾಗಿ ಸೇವಾಭಾರತಿಯ ಟ್ರಸ್ಟಿಗಳಾದ ಶ್ರೀಯುತ ಚಂದ್ರಶೇಖರ ಗೋಕಾಕ್ ಇವರು ಸ್ವಾಗತಿಸಿದರು. ಶಂಕರಗುಮಾಸ್ತೆಯವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ನೂರು ಮಕ್ಕಳಿಗೆ ಪುಸ್ತಕ ವಿತರಿಸಲಾಯಿತು.



# ನಿಮ್ಮೊಡನೆ......

ನಾವು ಹುಲು ಮಾನವರು. ಪ್ರಕೃತಿ ಮುನಿದರೆ ತಡೆಯಲು ನಮ್ಮಿಂದ ಸಾಧ್ಯವೇ? ಖಂಡಿತಾ ಇಲ್ಲ. ಕರ್ನಾಟಕ ಮತ್ತು ಆಂಧ್ರದಲ್ಲಿ ಮುನಿದ ಮಳೆರಾಯನಿಂದ ಉಂಟಾದ ಪ್ರವಾಹಕ್ಕೆ ಸಿಕ್ಕಿ ನೂರಾರು ಜನರು ಪ್ರಾಣ ಕಳೆದುಕೊಂಡಿದ್ದಾರೆ. ಲಕ್ಷಾಂತರ ಜನರು ನಿರ್ಗತಿಕರಾಗಿದ್ದಾರೆ. ಮುಂದೇನು ಎನ್ನುವುದೇ ತೋಚದೆ ಕುಳಿತಿರುವ ಕುಟುಂಬಗಳು ಅದೆಷ್ಟೋ. ಗತಿಸಿದ ಜೀವಗಳಿಗೆ ಭಗವಂತನು ಶಾಂತಿಯನ್ನು ಕರುಣಿಸಲಿ, ಅವರ ಕುಟುಂಬಗಳಿಗೆ ಆ ನೋವನ್ನು ಸಹಿಸುವ ಶಕ್ತಿಯನ್ನು ಅವನು ಕೊಡಲಿ ಎಂದು ಪ್ರತಿಷ್ಠಾನ ಬಳಗವು ಆ ದಯಾಮಯನಾದ ಭಗವಂತನಲ್ಲಿ ಪ್ರಾರ್ಥಿಸುತ್ತದೆ.

ಆ ನೊಂದ ಬಂಧುಗಳೆಲ್ಲ ನಮ್ಮವರೇ. ನಮ್ಮ ಬಂಧುಗಳಿಗೆ ಬಂದ ಕಷ್ಟ ನಮಗೆ ಬಂದಂತೆಯೇ ಸರಿ. ಆದ್ದರಿಂದ ನಾವೆಲ್ಲಾ ಅವರೊಂದಿಗಿದ್ದೇವೆ ಎಂದು ಹೇಳೋಣ. ಅವರ ಜೀವನವನ್ನು ಪುನಃ ಕಟ್ಟಿಕೊಳ್ಳಲು ನಮ್ಮ ಶಕ್ತಿ ಮೀರಿ ಸಹಾಯ ಮಾಡೋಣ. ಆರ್.ಎಸ್.ಎಸ್. ಈ ನಿಟ್ಟಿನಲ್ಲಿ ಈಗಾಗಲೇ ಸಮರೋಪಾದಿಯಲ್ಲಿ ಕೆಲಸ ಮಾಡುತ್ತಿದೆ. ಕೊನೆಯ ಪುಟದಲ್ಲಿ ಅದಕ್ಕೆ ಸಂಬಂಧಿಸಿದ ಮನವಿಯನ್ನೂ ಕೊಡಲಾಗಿದೆ. ಹಿಂದು ಸೇವಾ ಪ್ರತಿಷ್ಠಾನವೂ ಅಲ್ಲಿನ ಬಂಧುಗಳಿಗೆ ಸಹಾಯ ಮಾಡುವ ಉದ್ದೇಶದಿಂದ 'ಯೂತ್ ಫಾರ್ ಸೇವಾ'ದ ಮೂಲಕ ಪರಿಹಾರ ನಿಧಿ ಸಂಗ್ರಹ ಮಾಡುತ್ತಿದೆ. ಅದರ ಪ್ರಕಟಣೆಯನ್ನೂ ಕೊಡಲಾಗಿದೆ. ಗಮನಿಸಿ, ಸಹಕರಿಸಿ.

**– ಸಂಪಾದಕ.**

## ನೆರೆ ಪರಿಹಾರ ನಿಧಿಗಾಗಿ ನೆಲೆ ಮಕ್ಕಳ ಉಪವಾಸ

ನೆರೆ ಪರಿಹಾರ ನಿಧಿಗಾಗಿ ಪ್ರತಿಷ್ಠಾನದ ಎಲ್ಲಾ 9 ನೆಲೆಯ ಮಕ್ಕಳು ಇದೇ ತಿಂಗಳ 10ನೆಯ ತಾರೀಖಿನಂದು ರಾತ್ರಿಯ ಊಟ ಬಿಟ್ಟು ಉಳಿತಾಯವಾದ ಹಣವನ್ನು ಪರಿಹಾರ ನಿಧಿಗೆ ನೀಡಲು ನಿರ್ಧರಿಸಿದ್ದಾರೆ. ಪ್ರತಿಷ್ಠಾನದ ಎಲ್ಲ ಬಂಧುಗಳು ನಮ್ಮೊಂದಿಗೆ ಈ ಉಪವಾಸದಲ್ಲಿ ಸೇರಿಕೊಳ್ಳಬೇಕೆನ್ನುವುದು ನೆಲೆ ಮಕ್ಕಳ ಬಯಕೆ. ನಾವೆಲ್ಲರೂ ಅವರೊಂದಿಗಿದ್ದೇವೆ ಎಂದು ಹೇಳಿದ್ದೇವೆ. ನೀವೂ ಸೇರಿಕೊಳ್ಳು ತ್ತೀರಲ್ಲವೇ? ಆ ಭರವಸೆ ನಮಗಿದೆ. ಜೊತೆಗೆ, ನಾವು ಉಪವಾಸ ಮಾಡುವುದಲ್ಲದೇ, ನಮ್ಮ ಪರಿಚಯದವರನ್ನೂ ನಮ್ಮೊಂದಿಗೆ ಸೇರಿಕೊಳ್ಳಲು ಹೇಳೋಣ, ಪರಿಹಾರ ನಿಧಿಗೆ ನಮ್ಮ ಕಾಣಿಕೆ ಅರ್ಪಿಸೋಣ. ಹೀಗೆ ಸಂಗ್ರಹವಾದ ಹಣವನ್ನು ಪ್ರತಿಷ್ಠಾನದ ಪರಿಹಾರ ನಿಧಿಗೆ ಕಳುಹಿಸಬೇಕಾಗಿ ವಿನಂತಿ.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯಕರ್ತರ ಮೂಲಕ ದೇಶದ 73 ಸಾವಿರಕ್ಕೂ ಹೆಚ್ಚು ಸ್ಥಳಗಳಲ್ಲಿ 1.5 ಲಕ್ಷಕ್ಕೂ ಹೆಚ್ಚು ಸೇವಾ ಕಾರ್ಯಗಳು ನಡೆಯುತ್ತಿವೆ.



## ಯೋಗಾಸನ

### ತ್ರಿಕೋನಾಸನ



ಉಸಿರು ತೆಗೆದುಕೊಳ್ಳುತ್ತಾ ನೆಗೆದು ಕಾಲುಗಳನ್ನು ಪಕ್ಕಕ್ಕೆ ಮಾಡಿ. ಕಾಲುಗಳ ನಡುವಿನ ಅಂತರ ಸುಮಾರು ಒಂದು ಮೀಟರ್ ಇರಲಿ. ಬಲಪಾದ ಬಲಕ್ಕೆ (90 ಡಿಗ್ರಿ) ಎಡಪಾದ ಎಡಕ್ಕೆ ಓರೆಯಾಗಿ ಇರಲಿ. ಕೈಗಳನ್ನು ಚಾಚಿ ಉಸಿರನ್ನು ಬಿಡುತ್ತಾ ಶರೀರವನ್ನು ಬಲಕ್ಕೆ ಬಗ್ಗಿಸಿ, ಬಲ ಅಂಗೈಯನ್ನು ಬಲಪಾದದ ಮೇಲೆ ಒತ್ತಿ ಇಡಿ. ಎಡಗೈ ನೇರವಾಗಿ ನೆಲಕ್ಕೆ ಲಂಬವಾಗಿ ಬಲ ಹೆಗಲಿನ ನೇರದಲ್ಲಿರಲಿ. ಬಲಭುಜ ಮುಂದಕ್ಕೆ, ಎಡಭುಜ ಹಿಂದಕ್ಕೆ ತಳ್ಳಿ. ದೃಷ್ಟಿ ಎಡಗೈ ಹೆಬ್ಬೆರಳಿನ ಕಡೆಗೆ. ಹೀಗೆಯೇ ಎಡಬದಿಯಲ್ಲೂ ಮಾಡಿ.

**ಉಪಯೋಗ:** ಕಾಲಿನ ಮತ್ತು ಪೃಷ್ಠದ ಸ್ನಾಯುಗಳನ್ನು ಹದಗೊಳಿಸುತ್ತದೆ. ಬೆನ್ನುನೋವು ಮತ್ತು ಕತ್ತು ನೋವುಗಳನ್ನು ನಿವಾರಿಸುತ್ತದೆ. ಕೈಗಳಿಗೆ ಬಲ ಬರುತ್ತದೆ.

## ಯೂತ್ ಫಾರ್ ಸೇವಾ

### ಪ್ರವಾಹಸಂತ್ರಸ್ತರಿಗೆ ಸಹಾಯಕ್ಕಾಗಿ ಮನವಿ.

ಉತ್ತರ ಕರ್ನಾಟಕದ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಪರಿಹಾರ ಕಾರ್ಯ ನಡೆಸಲು ಯೂತ್ ಫಾರ್ ಸೇವಾದ ಹಲವು ಕಾರ್ಯಕರ್ತರು ಈಗಾಗಲೇ ತೆರಳಿದ್ದು, ಇತ್ತ ಪರಿಹಾರ ಕಾರ್ಯಕ್ಕಾಗಿ ಧನ ಸಂಗ್ರಹ ಕಾರ್ಯ ಪ್ರಾರಂಭವಾಗಿದೆ. ಗ್ರಾಮಗಳ ಪುನರ್ನಿರ್ಮಾಣ ಕಾರ್ಯವು ಪ್ರಾರಂಭವಾಗಬೇಕಿದ್ದು, ತಮಗೆಲ್ಲಾ ತಿಳಿದಂತೆ ಇದಕ್ಕೆ ದೊಡ್ಡ ಪ್ರಮಾಣದ ಹಣದ ಅಗತ್ಯವಿದೆ. ಆದ್ದರಿಂದ ಸಹೃದಯ ಬಂಧುಗಳಾದ ತಾವುಗಳು ನೊಂದವರಿಗೆ ಬದುಕನ್ನು ಕಟ್ಟಿಕೊಡುವ ಈ ಪವಿತ್ರ ಕಾರ್ಯದಲ್ಲಿ ನಮ್ಮೊಂದಿಗೆ ಕೈಜೋಡಿಸಬೇಕಾಗಿ ಪ್ರಾರ್ಥನೆ.

ದಾನಿಗಳು ಚೆಕ್/ಡಿ.ಡಿ.ಗಳನ್ನು ಹೆಚ್.ಎಸ್.ಪಿ. ನ್ಯಾಚುರಲ್ ಕಲಾಮಿಟಿಸ್ ರಿಲೀಫ್ ಫಂಡ್" ಹೆಸರಿಗೆ ನೀಡಬೇಕಾಗಿ ವಿನಂತಿ. ತಮ್ಮ ನೆರವನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದು.

**ಯೂತ್ ಫಾರ್ ಸೇವಾ**
ಅಜಿತಶ್ರೀ, 8/28, ಬಸವನಗುಡಿ ರಸ್ತೆ,
ಬೆಂಗಳೂರು – 560 004

ನೇರವಾಗಿ ನಮ್ಮ ಬ್ಯಾಂಕ್ ಅಕೌಂಟಿಗೆ ಹಣ ವರ್ಗಾವಣೆ ಮಾಡುವವರು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಶಂಕರಪುರಂ (ಬೆಂಗಳೂರು) ಶಾಖೆಯ **ಹೆಚ್.ಎಸ್.ಪಿ. ನ್ಯಾಚುರಲ್ ಕಲಾಮಿಟಿಸ್ ರಿಲೀಫ್ ಫಂಡ್"**ನ ಹೆಸರಿನಲ್ಲಿರುವ ಉಳಿತಾಯ ಖಾತೆ ಸಂಖ್ಯೆ – 64050593389 ಕ್ಕೆ ವರ್ಗಾವಣೆ ಮಾಡಬಹುದು. ದಾನಿಗಳು ದಯವಿಟ್ಟು ತಮ್ಮ ಹೆಸರು ವಿಳಾಸವನ್ನು ನಮಗೆ ತಿಳಿಸಿ, ಸರಿಯಾದ ವಿಳಾಸಕ್ಕೆ ರಶೀದಿ ಕಳುಹಿಸಲು ಸಹಕರಿಸಬೇಕಾಗಿ ವಿನಂತಿ.

ಹೆಚ್ಚಿನ ಮಾಹಿತಿಗೆ 93419 80237 (ಅಶೋಕ್) ಅಥವಾ 99454 29131 (ವಿಕ್ರಾಂತ್) ದೂರವಾಣಿಗಳನ್ನು ಸಂಪರ್ಕಿಸಬಹುದು. 080–26608926.

## ಸಂತ ವಚನ

ದೇವಸ್ಥಾನಗಳು ಊರಿನವರೆಲ್ಲರ ಮನೆಯಿದ್ದಂತೆ. ದೇವಸ್ಥಾನದಲ್ಲಿ ಪೂಜೆ ಉತ್ಸವಗಳ ವೈಭವದಿಂದ ಮಾತ್ರ ಭಕ್ತಿ ತೋರಿಸಿದರೆ ಸಾಲದು. ಅಂತರಂಗ ಶುದ್ಧಿಯಿಂದ ಮಾಡಿದ ಕಾರ್ಯವು ಮಾತ್ರ ನಿಜವಾದ ಭಕ್ತಿಯನ್ನು ತೋರಿಸುತ್ತದೆ.

– ಶ್ರೀ ವಿಶ್ವೇಶತೀರ್ಥ ಸ್ವಾಮೀಜಿ

## ಅಮೃತ ಬಿಂದು

**ಅಡಿಜಾರಿ ಬೀಳುವುದು ತಡವಿಕೊಂಡೇಳುವುದು ।**
**ಕಡುಬನುಂಗುವುದು ಕಹಿಮದ್ದಕುಡಿಯುವುದು ॥**
**ದುಡುಕಿಮತಿದಪ್ಪುವುದು ತಪ್ಪನೊಪ್ಪೆನ್ನುವುದು ।**
**ಬದುಕೆಂಬುದಿದು ತಾನೆ – ಮಂಕುತಿಮ್ಮ ॥**

ಕಾಲುಜಾರಿ ಬೀಳುವುದು, ಮೈ ತಡವಿಕೊಂಡು ನಿಧಾನವಾಗಿ ಎದ್ದು ನಿಲ್ಲುವುದು. ಸಿಹಿಯಾಗಿದೆ ಎಂದು ಕಡಬು ತಿನ್ನುವುದು, ಅಜೀರ್ಣ ವಾದಾಗ ಕಹಿಯಾದ ಔಷಧಿ ನುಂಗುವುದು. ಜೀವನದಲ್ಲಿ ದುಡುಕಿ ತಪ್ಪು ಮಾಡುವುದು, ಅದನ್ನೇ ಸರಿಯೆಂದು ವಾದಿಸುವುದು. ನಾವು ನಿತ್ಯ ಜೀವನದಲ್ಲಿ ಇದನ್ನೇ ಮಾಡುತ್ತಾ ಇರುತ್ತೇವೆ. ಇದನ್ನೇ ತಾನೇ ಬದುಕೆಂದು ಕರೆಯುವುದು!

## ವದತ ಸಂಸ್ಕೃತಮ್

**ಸತೀಶಃ:** **ರಮೇಶ, ಭವತಃ ಪುತ್ರಃ ಇದಾನೀಂ ಕಿಂ ಪಠತಿ?**

(ರಮೇಶ, ನಿನ್ನ ಮಗ ಈಗ ಏನು ಓದ್ತಾ ಇದಾನೆ?)

**ರಮೇಶಃ:** **ದಶಮಕಕ್ಷ್ಯಾ ಅಭವತ್। ಸಃ ಸಮ್ಯಕ್ ಚಿತ್ರಂ ಲಿಖತಿ। ತದರ್ಥಂ ಕಲಾ ವಿಭಾಗಂ ಸ್ವೀಕರೋತಿ।**

(ಹತ್ತನೇ ತರಗತಿ ಆಯ್ತು. ಅವನು ತುಂಬಾ ಚೆನ್ನಾಗಿ ಚಿತ್ರ ಬರೀತಾನೆ. ಅದಕ್ಕೆ ಅವನು ಕಲೆಯ ವಿಷಯವನ್ನು ತೆಗೆದು ಕೊಳ್ಳುತ್ತಾನೆ.)

**ಸತೀಶಃ:** **ಕಿಮರ್ಥಂ ? ವಿಜ್ಞಾನ ವಿಭಾಗಂ ವಾ ವಾಣಿಜ್ಯ ವಿಭಾಗಂ ವಾ ದಾಪಯತು । ನೋಚೇತ್ ಅಗ್ರೇ ಜೀವನೇ ಕಷ್ಟಂ ಭವತಿ ।**

(ಏಕೆ? ವಿಜ್ಞಾನವನ್ನೋ ಅಥವಾ ವಾಣಿಜ್ಯ ವಿಭಾಗವನ್ನೋ ಕೊಡಿಸು. ಇಲ್ಲದಿದ್ದರೆ ಜೀವನದಲ್ಲಿ ಕಷ್ಟ ಆಗುತ್ತೆ.)

**ರಮೇಶಃ:** **ನಾಸ್ತಿ ಕಲಾಕಾರಃ ಅಪಿ ಜೀವನಂ ಕುರ್ವಂತಿ ಖಲು । ಏಷಃ ಅಪಿ ಕರೋತಿ।**

(ಇಲ್ಲ. ಕಲಾಕಾರರೂ ಸಹ ಜೀವನವನ್ನು ಮಾಡ್ತಾರಲ್ವಾ ಇವನೂ ಸಹ ಮಾಡ್ತಾನೆ.)

**ಸಂಪಾದಕೀಯ ಸಹಕಾರ**

**ಶ್ರೀಮತಿ ಮೃದುಲಾ ವಿಜಯೇಂದ್ರ, ಕು॥ ಪ್ರತಿಭಾ**
**ಶ್ರೀಮತಿ ವರಲಕ್ಷ್ಮೀ, ಕು॥ ಲತಾ**

## ನಿರ್ದೇಶಕರ ನುಡಿ

### ನಮ್ಮ ಸಂಸ್ಕೃತಿ ನಿಂತ ನೀರಲ್ಲ

ಸೆಪ್ಟೆಂಬರ್ 30ರ ರಾತ್ರಿ 10 ಗಂಟೆಗೆ ಮಹಿಳಾ ಸೇವಾವ್ರತಿ ಶಿಬಿರಕ್ಕೆ ಬೇಕಾದ ಸಾಮಾನುಗಳನ್ನು ಟಾಟಾ ಸುಮೋದಲ್ಲಿ ತುಂಬಿಕೊಂಡು ಯಲಹಂಕದ ನಮ್ಮ ಶಿಬಿರಸ್ಥಾನಕ್ಕೆ ಹೊರಟಾಗ ಶಿಬಿರದಿಂದ ಸುಮಾರು 1 ಕಿ.ಮೀ. ದೂರದಲ್ಲಿ ಮುಖ್ಯರಸ್ತೆಯ ತಿರುವಿನಲ್ಲಿ ರಸ್ತೆವಿಭಜಕದ (Divider) ಮೇಲೆ ಸುಮಾರು 55 ವರ್ಷ ಪ್ರಾಯದ ಮಹಿಳೆ ಕುಳಿತಿರುವುದು ಕಾಣಿಸಿತು. ಯಾರಿರಬಹುದೆಂದು ಯೋಚಿಸುತ್ತಿರುವಾಗ ಬೆಳಿಗ್ಗೆ 5 ಗಂಟೆಯಿಂದ ಅಲ್ಲಿಯೇ ಕುಳಿತಿದ್ದನ್ನು ತಾನು ನೋಡಿದ್ದಾಗಿ ನಮ್ಮ ಸಾರಥಿ ಗಿರೀಶ ಹೇಳಿದ. ತುರ್ತಾಗಿ ಸಾಮಾನುಗಳನ್ನು ಶಿಬಿರದಲ್ಲಿ ಇಳಿಸಿ ಪುನಃ ನೋಡಿ ಬರೋಣವೆಂದು ಹೋದರೆ ಅಲ್ಲಿ ಇಬ್ಬರು ಪೋಲೀಸರು ಹಾಗೂ ನಾಲ್ಕಾರು ಜನ ಸೇರಿದ್ದರು. ವಿಚಾರಿಸಲಾಗಿ ಗುಜರಾತಿ ಭಾಷೆ ಬಿಟ್ಟು ಆ ಮಹಿಳೆಗೆ ಬೇರೆ ಯಾವ ಭಾಷೆಯೂ ತಿಳಿಯದು. ಬೆಳಗಿನಿಂದ ಮಳೆಯಲ್ಲಿ ತೊಯ್ದು ತೊಪ್ಪೆಯಾಗಿ ಚಳಿಯಲ್ಲಿ ನಡುಗುತ್ತಾ ಕುಳಿತಿದ್ದನ್ನು ಕಂಡು ಸಂಕಟವಾಯಿತು. ಶಿಬಿರಕ್ಕೆ ಹೋಗೋಣವೆಂದು ಕರೆದರೆ ಯಾರಾದರೂ ಮಹಿಳೆಯರು ಬಂದರೆ ಮಾತ್ರ ಅವರ ಜೊತೆ ಬರುವುದಾಗಿ ಹೇಳಿದರು. ಒಬ್ಬರು 500/– ಕೊಟ್ಟರೆ ತೆಗೆದುಕೊಳ್ಳಲೇ ಇಲ್ಲ. ಕೊನೆಗೆ ಗುಜರಾತಿ ಭಾಷೆ ಗೊತ್ತಿರುವ ಸೇವಾವ್ರತಿ ಹರ್ಷಿಣಿ ಹಾಗೂ ಶ್ರೀಮತಿ ಪ್ರಿಯಾ ಗಿರೀಶ ಗೌಡ ಇವರನ್ನು ಕರೆಸಲಾಯಿತು. ಗುಜರಾತಿಯಲ್ಲಿ ಮಾತನಾಡಿಸಿದಾಗ ತಿಳಿದು ಬಂದಿದ್ದು ಇಷ್ಟು, ಊರು ಬಿನಾರ್, ಬದುಕಲು ಇಷ್ಟವಿಲ್ಲದೆ ಸಾಯಲು ಬಂದಿರುವುದು. ಟ್ರೇನ್‌ನಲ್ಲಿ ಕುಳಿತನಂತರ ಎಲ್ಲಿಗೆ ಹೋಗಬೇಕು ಎಲ್ಲಿ ಇಳಿಯಬೇಕು ಯಾವುದೂ ಗೊತ್ತಿಲ್ಲದೆ ಯೋಗಾಯೋಗದಿಂದ ಯಲಹಂಕಕ್ಕೆ ಬಂದಿದ್ದಾರೆ. ಮನೆಯಲ್ಲಿ ಮಗ ವಿದ್ಯುತ್ ನಿಗಮದಲ್ಲಿ ಕೆಲಸ ಮಾಡುತ್ತಾನೆ ಎಂದು ತಿಳಿಯಿತು.

ಶಿಬಿರಕ್ಕೆ ಕರೆತಂದಾಗ ವಸತಿಯಲ್ಲಿ ಸ್ನಾನ ಮಾಡಿ ಸ್ವಲ್ಪ ಊಟ ಮಾಡಿದರು. ಮುಂದಿನ ಎರಡು ದಿನ ಸರಿಯಾಗಿ ಊಟ, ತಿಂಡಿ ಮಾಡುತ್ತಿರಲಿಲ್ಲ. ಕಾರಣ ಕೇಳಿದಾಗ ಏನೂ ಕೆಲಸ ಮಾಡದೆ ನಾನು ಹಾಗೆ ಊಟ ಮಾಡುವುದಿಲ್ಲ ಎಂದರು. ಹಾಗಾದರೆ ನೀವು ಇರುವ ವಸತಿಯನ್ನು ನೀವೇ ಸ್ವಚ್ಛ ಮಾಡಿ ಎಂದಾಗ ಸ್ವಚ್ಛ ಮಾಡಿಯೇ ಊಟ, ತಿಂಡಿ ಮಾಡುತ್ತಿದ್ದರು. ಇನ್ನು ಅವರ ಊರು, ಮನೆ ಹುಡುಕುವುದು ಹೇಗೆ? ಕಡೆಗೆ ಗುಜರಾತಿನ ಒಬ್ಬ ಕಾಲೇಜು ವಿದ್ಯಾರ್ಥಿ ಸ್ವಯಂಸೇವಕ ತೇಜಸ್ ಅಹಮದಾಬಾದಿನ ಆರ್.ಎಸ್.ಎಸ್ ಕಾರ್ಯಾಲಯವನ್ನು ಸಂಪರ್ಕಿಸಿ ಅಲ್ಲಿಂದ ಸೂರತ್ ಕಾರ್ಯಾಲಯವನ್ನು ಸಂಪರ್ಕಿಸಿದಾಗ ಸೂರತ್‌ನಿಂದ 3 ಗಂಟೆ ಪ್ರಯಾಣದ ಊರು ಬಿನಾರ್ ಎಂದು ತಿಳಿದು ಅವರ ಮನೆ ಪತ್ತೆ ಮಾಡಲಾಯಿತು. ಮನೆಯವರ ಜೊತೆ ದೂರವಾಣಿಯಲ್ಲಿ ಮಾತನಾಡಿ ವಿಷಯ ತಿಳಿಸಿದಾಗ ಅವರಿಗಾದ ಆನಂದ ಹೇಳತೀರದು. ಸ್ವಲ್ಪ ಬುದ್ಧಿ ಭ್ರಮಣೆಯಾಗಿರುವ ತಾಯಿ ಗೀತಾ ಪಟೇಲ್ ಕಾಣೆಯಾಗಿದ್ದಾರೆಂದು ಆರಕ್ಷಕ ಠಾಣೆಗೆ ದೂರು ಸಲ್ಲಿಸಿ, ಪತ್ರಿಕೆಯಲ್ಲಿ ಸುದ್ದಿ ಕೊಟ್ಟರೂ ಸುಳಿವೇ ಸಿಗದ ತಾಯಿ ಬೆಂಗಳೂರಿನಲ್ಲಿ ಸುರಕ್ಷಿತವಾಗಿದ್ದಾರೆಂದು ತಿಳಿದು ಸಮಾಧಾನ, ಸಂತೋಷ. ಮನೆಯವರು ಅಷ್ಟು ದೂರದಿಂದ ಬರುವಾಗ ಪುನಃ ಎರಡು ದಿನ ಕಳೆಯಿತು. ತಾಯಿ ಮಗನ ಮಿಲನ, ಆನಂದದ ಕಣ್ಣೀರ ಕೋಡಿ ನೋಡಿ ನಮ್ಮೆಲ್ಲರ ಕಣ್ಣಾಲಿಗಳೂ ತುಂಬಿ ಬಂದವು. ಹೊರಡುವಾಗ ಆ ತಾಯಿ ನೂರರ ನೋಟೊಂದನ್ನು ಬೇಡವೆಂದರೂ ನನ್ನ ಕಿಸೆಗೆ ಹಾಕಿದರು! ಮಗ ಕೂಡ ಸಂಸ್ಥೆಗೆ ದೇಣಿಗೆಯಾಗಿ ಪ್ರೀತಿಯಿಂದ ಕೊಡುತ್ತಿದ್ದೇನೆ ಎಂದು ಒತ್ತಾಯ ಪೂರ್ವಕವಾಗಿ ಸ್ವಲ್ಪ ಹಣ ನೀಡಿದ.

ಇಲ್ಲಿ ನಾವು ಗಮನಿಸಿದ ಸಂಗತಿ – ಮೊದಲನೆಯದಾಗಿ, 55 ವಯಸ್ಸಿನ ಆ ಮಹಿಳೆ ಒಂಟಿಯಾಗಿ ಅಪರಿಚಿತ ಸ್ಥಳಕ್ಕೆ ಬಂದು ಮಳೆ, ಚಳಿಯಲ್ಲಿ ರಸ್ತೆಯಲ್ಲಿ ಕುಳಿತಿದ್ದರೂ ಕೇವಲ ಪುರುಷರೇ ಬಂದು ಕರೆದಾಗ ಮಹಿಳೆಯರು ಜೊತೆಗೆ ಇದ್ದರೆ ಬರುವುದಾಗಿ ಹೇಳಿದ್ದು. ಎರಡನೆಯದಾಗಿ, ಬೇರೆಯವರು ಹಣ ಕೊಟ್ಟಾಗಲೂ ತೆಗೆದುಕೊಳ್ಳದೇ ಇದ್ದಿದ್ದು. ಮೂರನೆಯದಾಗಿ, ಏನೂ ಕೆಲಸ ಮಾಡದೆ ಆಹಾರ ಸ್ವೀಕರಿಸುವುದು ಇನ್ನೊಬ್ಬರ ಹಂಗಿನಲ್ಲಿದಂತೆ ಎಂದು ತಿಳಿದು ಕನಿಷ್ಠ ನೆಲ ಗುಡಿಸಿ, ಒರೆಸಿ ಆಹಾರ ತೆಗೆದುಕೊಂಡಿದ್ದು. ಇಂತಹ ಶೀಲವಂತ, ಸುಸಂಸ್ಕೃತ ತಾಯಂದಿರಿಂದಾಗಿ ನಮ್ಮ ಸಂಸ್ಕೃತಿಯ ಪ್ರವಾಹ ಪೀಳಿಗೆಯಿಂದ ಪೀಳಿಗೆಗೆ ನಿರಂತರವಾಗಿ ಹರಿದು ಬರುತ್ತಿದೆ. ನಮ್ಮದು ಅಂತಹ ಜೀವಂತ ಸಂಸ್ಕೃತಿಯಾಗಿದೆ!

- ಶ್ರೀಧರ ಸಾಗರ

## ವಿಶ್ವ ಮಂಗಲ ಗೋಗ್ರಾಮ ಯಾತ್ರೆಗೆ ಚಾಲನೆ

**ಉಪ್ಪಿನಂಗಡಿ:** ಗೋ ಸಂರಕ್ಷಣೆ ಮತ್ತು ತನ್ಮೂಲಕ ಭಾರತೀಯತೆಯ ರಕ್ಷಣೆಗಾಗಿ ಸಂಘ ಪರಿವಾರ ಹಮ್ಮಿಕೊಂಡಿರುವ ವಿಶ್ವ ಮಂಗಲ ಗೋ ಗ್ರಾಮ ಯಾತ್ರೆಯ ಕಾರ್ಯಾಲಯ ಮತ್ತು ಸಹಿ ಸಂಗ್ರಹ ಅಭಿಯಾನದ ಉದ್ಘಾಟನೆಯು ಸೋಮ ವಾರದಂದು ಉಪ್ಪಿನಂಗಡಿಯಲ್ಲಿ ನಡೆಯಿತು.

ಕಾರ್ಯಾಲಯವನ್ನು ಉದ್ಘಾಟಿಸಿ ಮಾತನಾಡಿದ ಉಪ್ಪಿನಂಗಡಿಯ ವೈದ್ಯ ಡಾ। ಎಂ ಆರ್ ಶೆಣೈ ರವರು ವಿಶ್ವ ಮಾನ್ಯ ಭಾರತೀಯ ಸಂಸ್ಕೃತಿಯಲ್ಲಿ ಗೋ ಮಾತೆಗೆ ಮಾತೃ ಸ್ಥಾನ ಕಲ್ಪಿಸಲಾಗಿದೆ. ತನ್ನ ಬದುಕಿನಾರಂಭದಿಂದ ಅಂತ್ಯದ ವರೆಗೆ ಮಾನವನಿಗೆ ಉಪಕಾರಿಯಾದ ಗೋವನ್ನು ಕನಿಷ್ಠ ಉಪಕಾರ ಸ್ಮರಣೆಯಲ್ಲಿಯಾದರೂ ಹತ್ಯೆ ಮಾಡದೇ ಸಲಹಬೇಕಾಗಿದೆ ಎಂದರು. ಸಮಾಜದ ಮತ್ತು ಸರಕಾರದ ಗಮನ ಸೆಳೆಯುವ ನಿಟ್ಟಿನಲ್ಲಿ ಹಮ್ಮಿಕೊಂಡ ಸಹಿ ಸಂಗ್ರಹ ಅಭಿಯಾನ ಯಶಸ್ವಿಯಾಗಲಿ ಎಂದವರು ಶುಭ ಹಾರೈಸಿದರು.

ಸಹಿ ಸಂಗ್ರಹ ಅಭಿಯಾನದ ಉದ್ಘಾಟನಾ ಕಾರ್ಯಕ್ರಮದಲ್ಲಿ ಬೌದ್ಧಿಕ್ ನೀಡಿದ ಆರ್ ಎಸ್ ಎಸ್ ನ ಮುಂದಾಳು ಅಚ್ಚುತ್ ನಾಯಕ್ ರವರು, ದೇಶ ಎದುರಿಸುವ ಹಲವಾರು ಸಮಸ್ಯೆಗಳನ್ನು ನಾವು ನಿರ್ಲಕ್ಷ್ಯ ಮಾಡಿದ್ದೇ ಆದಲ್ಲಿ ಭವಿಷ್ಯ ತುಂಬಾ ಅಪಾಯಕಾರಿಯಾಗಿ ಪರಿಣಮಿಸಲಿದೆ. ಭಾರತ ಗ್ರಾಮ ಕೇಂದ್ರಿತ, ಕೃಷಿ ಆಧಾರಿತ ದೇಶವಾಗಿದ್ದು, ಇದು ಇಲ್ಲಿನ ಸಂಸ್ಕೃತಿಯ ಉಳಿಯುವಿಕೆಗೆ ಮೂಲ ವಾಗಿದೆ. ಗ್ರಾಮಗಳನ್ನು ಕಡೆಗಣಿಸುವುದರಿಂದ ನಾವು ದೇಶವನ್ನು ಕಡೆಗಣಿಸಿದಂತಾಗುತ್ತದೆ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ವಿಶ್ವ ಮಂಗಲ ಗೋ ಗ್ರಾಮ ಯಾತ್ರೆಯ ಜಿಲ್ಲಾಧ್ಯಕ್ಷ ಧನ್ಯ ಕುಮಾರ್ ರೈ ಬಿಳಿಯೂರು ಗುತ್ತು ರವರು ವಹಿಸಿ ಯಾತ್ರೆಯ ಯಶಸ್ಸಿಗೆ ಪ್ರತಿಯೋರ್ವರೂ ಶ್ರಮಿಸುವ ಅಗತ್ಯತೆಯನ್ನು ವಿವರಿಸಿದರು.

ವಿಶ್ವ ಮಂಗಲ ಗೋ ಗ್ರಾಮ ಯಾತ್ರೆಯ ಕಡಬ ತಾಲೂಕು ಅಧ್ಯಕ್ಷ ಸತೀಶ್ ನಾಯಕ್, ಉಪ್ಪಿನಂಗಡಿ ಗ್ರಾಮ ಸಮಿತಿಯ ಅಧ್ಯಕ್ಷ ಮನೋಜ್ ಶೆಟ್ಟಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸುಧಾಕರ ಶೆಟ್ಟಿರವರ ನಿರೂಪಣೆಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಅನಿಲ್ ಸ್ವಾಗತಿಸಿದರು. ಉದ್ಯಮಿಗಳಾದ ಯು. ರಾಮ, ವಿಶ್ವನಾಥ ಮುಂಡ್ರುಪಾಡಿ, ಹೇರಂಭ ಶಾಸ್ತ್ರಿ, ಹರಿರಾಮ ಚಂದ್ರ, ಯತೀಶ್ ಶೆಟ್ಟಿ ಮೊದಲಾದವರು ಉಪಸ್ಥಿತರಿದ್ದರು

## ಹೇಳಿ ಉತ್ತರ?!

**ಈ ಬಾರಿಯ ಪ್ರಶ್ನೆಗಳು:**

1. ಜನಕನ ರಾಜ್ಯದ ರಾಜಧಾನಿ ಯಾವುದು?
2. ಅಯೋಧ್ಯೆಯು ಯಾವ ರಾಜ್ಯದ ರಾಜಧಾನಿಯಾಗಿತ್ತು?
3. ರಾಮನು ವನವಾಸದಲ್ಲಿದ್ದಾಗ ಭರತನು ಅವನನ್ನು ಯಾವ ಸ್ಥಳದಲ್ಲಿ ಭೇಟಿ ಮಾಡಿ ಪಾದುಕೆಗಳನ್ನು ಪಡೆದನು?
4. ದಶರಥನ ಮಕ್ಕಳ ಪೈಕಿ ಅವಳಿ ಮಕ್ಕಳು ಯಾರು?
5. ಮಕ್ಕಳನ್ನು ಪಡೆಯಲು ದಶರಥನು ಯಾವ ಯಜ್ಞವನ್ನು ಮಾಡಿದನು?

**ಕಳೆದ ಬಾರಿಯ ಪ್ರಶ್ನೆಗಳಿಗೆ ಸರಿಯುತ್ತರಗಳು ಹೀಗಿವೆ:**

1. ಅರುಣ 2. ವಾಸುಕಿ 3. ವಿನುತೆ 4. ಶುಕ್ರಾಚಾರ್ಯ 5. ಬೃಹಸ್ಪತಿ

**ಕಳೆದ ಬಾರಿಯ ಪ್ರಶ್ನೆಗಳಿಗೆ ಸರಿಯುತ್ತರ ಬರೆದವರು:**

ಶಿರಸಿಯ ಭ। ಪಿ. ಎಂ. ಭ್ರಮರಾಂಬ,
ಸಿದ್ಧಾಪುರದ ಕು। ರವೀಂದ್ರ ರಾ. ಹೆಗಡೆ

## ಮಕ್ಕಳಿಗೆ ಸಂಸ್ಕಾರ ಶಿಕ್ಷಣ ಶಿಬಿರ

**ಉಪ್ಪಿನಂಗಡಿ:** ಶ್ರೀ ಮಾಧವ ಶಿಶು ಮಂದಿರ ಸಮಿತಿ ಉಪ್ಪಿನಂಗಡಿ ಇದರ ಆಶ್ರಯದಲ್ಲಿ ನೆಟ್ಟಿಬೈಲು ವೇದಶಂಕರ ನಗರದ ಶಿಶು ಮಂದಿರದಲ್ಲಿ ನಡೆದ ಐದು ದಿನಗಳ ಸಂಸ್ಕಾರ ಶಿಬಿರವು ಸಮಾರೋಪಗೊಂಡಿತು.



ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ ನಿವೃತ್ತ ವಾಯು ಸೇನಾಧಿಕಾರಿ ಪ್ರಸಕ್ತ ಉದ್ಯಮಿ ಜನಾರ್ದನರವರು ಎಳೆಯ ಮಕ್ಕಳಲ್ಲಿ ಸಂಸ್ಕಾರ ಮೂಡಿಸುವುದರಿಂದ ಅವರ ಬದುಕು ಸುಸಂಸ್ಕೃತಗೊಳ್ಳುವುದರಲ್ಲಿ ಸಂದೇಹವಿಲ್ಲ. ಸಮಾಜ ಹಾದಿ ತಪ್ಪಲು ಪ್ರಸಕ್ತ ದಿನಗಳಲ್ಲಿ ಲಭ್ಯವಿರುವ ಬಾಹ್ಯ ವಿಚಾರಗಳ ಮೇಲಾಟದ ಮಧ್ಯೆ ಮಕ್ಕಳಿಗೆ ಉಚಿತವಾಗಿ ಸಂಸ್ಕಾರ ಶಿಕ್ಷಣ ನೀಡಿರುವುದು ಶ್ಲಾಘನೀಯವೆಂದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ ಇನ್ನೋರ್ವ ಮುಖ್ಯ ಅತಿಥಿ ಯುವ ಉದ್ಯಮಿ ಕೆ.ಜೆ ವಿಶ್ವನಾಥರವರು ಶಾಲಾ ಕಾಲೇಜುಗಳಲ್ಲಿ ಮಠ ಮಂದಿರ ಗಳಲ್ಲಿ ದೊರೆಯಬೇಕಾದ ನೀತಿ ಶಿಕ್ಷಣ, ಸಂಸ್ಕಾರ ಶಿಕ್ಷಣ ದೊರೆಯದ ಕಾರಣ ದಿಂದಾಗಿ ಸಮಾಜದಲ್ಲಿ ಕ್ಲೇಷಮಯ ವಾತಾವರಣ ನಿರ್ಮಾಣವಾಗಿದೆ. ಮಕ್ಕಳಿಗೆ ಎಲ್ಲೆಡೆಯಲ್ಲಿಯೂ ಸಂಸ್ಕಾರ ಶಿಕ್ಷಣ ದೊರೆಯುವ ಅವಶ್ಯಕತೆ ಇದೆ ಎಂದು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ಶಿಶು ಮಂದಿರ ಸಮಿತಿ ಅಧ್ಯಕ್ಷ ಮನೋಜ್ ಶೆಟ್ಟಿ ವಹಿಸಿದ್ದರು. ಶಿಬಿರದಲ್ಲಿ 50 ವಿದ್ಯಾರ್ಥಿ – ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಶಿಬಿರದ ಸಂಪನ್ಮೂಲ ವ್ಯಕ್ತಿಗಳಾಗಿ ಸುಧಾಕರ ಶೆಟ್ಟಿ, ಯತೀಶ್ ಆಚಾರ್ಯ, ಐ. ಪುರೊಷೋತ್ತಮ ನಾಯಕ್, ಮಾಧವ ಆಚಾರ್ಯ, ಕೆ.ಜಗದೀಶ್ ಶೆಟ್ಟಿ, ನವೀನ್, ಶ್ರೀಮತಿ ಪುಷ್ಪಲತಾ ತಿಲಕ್‌ರವರು ಭಾಗವಹಿಸಿದ್ದರು. ಸಮಿತಿ ಸದಸ್ಯ ಹರಿರಾಮ ಚಂದ್ರರು ಪ್ರಸ್ತಾವಿಕ ಭಾಷಣ ಮಾಡಿದರು. ರೋಹಿತಾಕ್ಷ ಯು.ಕೆ ಸ್ವಾಗತಿಸಿ ರವೀಂದ್ರ ಆಚಾರ್ಯ ವಂದಿಸಿದರು

**ವರದಿ ಯು.ಎಲ್. ಉದಯ್ ಕುಮಾರ್**

## ಗೋ ಸಂವರ್ಧಿನಿ ಗೋಶಾಲೆಗೆ ಮಾನ್ಯತೆ

**ಹೊಸನಗರ** ತಾಲ್ಲೂಕಿನ ಕೊಡಚಾದ್ರಿಯ ತಪ್ಪಲಿನ ಸುಂದರ ಊರಾದ ಚಂಪಕಾಪುರ (ಸಂಪೆಕಟ್ಟೆ)ದಲ್ಲಿ "ಗೋಸಂವರ್ಧಿನಿ"ಗಳಿಂದ ಅನಾಥ, ದುರ್ಬಲ ಗೋವುಗಳನ್ನು ಸಂರಕ್ಷಿಸಿಕೊಂಡು ಬರುತ್ತಿದೆ. ಈ ಗೋಶಾಲೆಯ ಕಾರ್ಯವನ್ನು ಮೆಚ್ಚಿ ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯದ ಚೆನ್ನೈನಲ್ಲಿರುವ ಅಧಿಕೃತ ಕಛೇರಿ ಮಾನ್ಯತೆಯನ್ನು ನೀಡಿದೆ. ಇದು ನಿಸ್ವಾರ್ಥ ಗೋಸೇವೆಗೆ ಸಿಕ್ಕ ಪ್ರತಿಫಲ ಹಾಗೂ ಗೋ ಸಂರಕ್ಷಣೆಯ ಕಾರ್ಯಕ್ಕೆ ಇನ್ನೂ ಹೆಚ್ಚಿನ ಬಲಬಂದಂತಾಗಿದೆ ಎಂದು ವ್ಯಾಸಾ ಫೌಂಡೇಶನ್‌ನ ಕಾರ್ಯದರ್ಶಿಯಾದ ಶ್ರೀಯುತ ಸು.ರಾ. ಮಂಜುನಾಥರವರು ಹೇಳಿದ್ದಾರೆ.

# ಕರ್ನಾಟಕದಾದ್ಯಂತ ಸೇವಾವ್ರತಿ ಅಭಿಯಾನ

ಕಳೆದ 3 ವರ್ಷಗಳ ಹಿಂದೆ ನಡೆದ ಚಿಂತನ ಬೈಠಕ್ ಮತ್ತು ಅನೇಕ ವರ್ಷಗಳ ಅನುಭವದ ಆಧಾರದ ಮೇಲೆ ಈ 'ಸೇವಾವ್ರತಿ ಅಭಿಯಾನ'ವನ್ನು ಆಯೋಜಿಸಲಾಯಿತು. ಸಮಾಜಕ್ಕೆ ಪ್ರತಿಷ್ಠಾನದ ಸೇವಾಕಾರ್ಯಗಳ ಪರಿಚಯವಾಗಬೇಕು. ಗುಣಮಟ್ಟದ ಸೇವಾವ್ರತಿಗಳು ತಯಾರಾಗಬೇಕು, ಹೆಚ್ಚು ಸ್ಥಾನಗಳಿಂದ ಸೇವಾವ್ರತಿಗಳು ಬರುವಂತಾಗಬೇಕು ಎಂಬ ಉದ್ದೇಶವಿಟ್ಟುಕೊಂಡು ಈ ವರ್ಷ ಸೇವಾವ್ರತಿ ಅಭಿಯಾನವನ್ನು ನಿಶ್ಚಯಿಸಲಾಯಿತು.

ವಿಭಾಗಮಟ್ಟದಲ್ಲಿ ನಡೆಯುವ ವರ್ಷಾರಂಭದ ''ಸೇವಾವ್ರತಿ ಪ್ರಶಿಕ್ಷಣ ವರ್ಗ''ದಲ್ಲಿ ಸೇವಾವ್ರತಿಗಳು ಈ ಅಭಿಯಾನದ ಯಶಸ್ಸಿಗೆ ಏನೇನು ಮಾಡಬೇಕು ಎಂಬು ದನ್ನು ನಿರ್ಧರಿಸಲಾಯಿತು. ಸೇವಾವ್ರತಿಗಳಿಂದ ಸೇವಾವ್ರತಿಗಳು, ಆಡಳಿತ ಮಂಡಳಿಯಿಂದ ಸೇವಾವ್ರತಿ ಗಳು, ಚಟುವಟಿಕೆಗಳಿಂದ, ಪ್ರಕಲ್ಪಗಳಿಂದ ಸೇವಾವ್ರತಿ ಗಳು ಎಂಬ ರೀತಿಯಲ್ಲಿ ಪ್ರಯತ್ನಹಾಕುವದೆಂದು ನಿಶ್ಚಯಮಾಡಲಾಯಿತು. ಆಗಸ್ಟ್ 15ರಿಂದ 31ರೊಳಗೆ ಅಲ್ಲಲ್ಲಿಗೆ ಅನುಕೂಲವಾದ ದಿನಗಳಲ್ಲಿ ವ್ಯಾಪಕ ಸಂಪರ್ಕ ಮಾಡುವುದು, ಕರಪತ್ರಗಳನ್ನು ಹಂಚು ವುದು, ಭಿತ್ತಿಪತ್ರಗಳನ್ನು ಅಂಟಿಸುವುದು, ಪತ್ರಿಕೆ, ಮಾಧ್ಯಮಗಳಲ್ಲಿ ಸುದ್ದಿ ಹಾಗೂ ಜಾಹಿರಾತುಗಳನ್ನು ಕೊಡುವುದು ಇತ್ಯಾದಿ ಸಿದ್ಧತೆಯೊಂದಿಗೆ ಹೋಗ ಬೇಕೆಂದು ತೀರ್ಮಾನಿಸ ಲಾಯಿತು.

ಪೂರ್ವಭಾವಿಯಾಗಿ ಪ್ರಾಂತದಾದ್ಯಂತ ಬೇರೆ ಬೇರೆ ಕಡೆ ಸೇವಾವ್ರತಿಗಳನ್ನು ಹೊರಡಿಸಬಲ್ಲವರನ್ನು ಆರಿಸಿ, ಆಡಳಿತ ಮಂಡಳಿಯವರ ಜೊತೆ ವೈಯಕ್ತಿಕ ಮಾತುಕತೆ ಹಾಗು ಬೈಠಕ್‌ಗಳನ್ನು ನಡೆಸಿ ಅಲ್ಲಿ ಸಂದರ್ಶನಗಳನ್ನು ನಿಶ್ಚಯಿಸಲಾಯಿತು. ಹೊರಡಿಸ ಬಲ್ಲವರಿಗೆ ಎಂತಹವರು ಸೇವಾವ್ರತಿಯಾಗಿ ಬರಬೇಕು ಎಂಬ ಬಗ್ಗೆ ಸ್ಪಷ್ಟ ಕಲ್ಪನೆ ಬರುವಂತೆ ಪತ್ರಕ ಕಳಿಸಲಾಗಿತ್ತು.

ಸಂದರ್ಶನಗಳಲ್ಲಿ ಆಯ್ಕೆಯಾದವರನ್ನು ಪ್ರತಿಷ್ಠಾನದ ಸೇವಾ ಕಾರ್ಯದ ಪರಿಚಯದ ದೃಷ್ಟಿಯಿಂದ ಈಗಾಗಲೇ ಕ್ಷೇತ್ರದಲ್ಲಿರುವ ಸೇವಾವ್ರತಿಗಳ ಜೊತೆ ಮತ್ತು ಕೆಲವು ಪ್ರಕಲ್ಪಗಳಿಗೆ ಜೋಡಿಸಲಾಯಿತು. ಅವರನ್ನು ಕ್ಷೇತ್ರಕ್ಕೆ ಕಳಿಸಿಕೊಡುವ ಮುನ್ನ ಒಂದು ದಿನದ ಪ್ರಶಿಕ್ಷಣ ವರ್ಗ ನಡೆಸಬೇಕು, ಸಂದರ್ಶನಕ್ಕೆ ಬರುವಾಗ ಪಾಲಕರನ್ನು ಕಡ್ಡಾಯವಾಗಿ ಕರೆತರ ಬೇಕು ಕಾರಣ ಅವರಿಗೆ ಪ್ರತಿಷ್ಠಾನದ ಪರಿಚಯ ವಾಗಬೇಕು ಎಂದು ನಿಶ್ಚಯಿಸಲಾಯಿತು.

ಈ ಎಲ್ಲ ಪೂರ್ವತಯಾರಿಯೊಂದಿಗೆ ಸಂದರ್ಶನಕ್ಕೆ ಯೋಜನೆ ಮಾಡಲಾಯಿತು. ರಕ್ಷಾಬಂಧನ, ಗೋಕುಲಾಷ್ಟಮಿ ಸಂದರ್ಭದಲ್ಲಿ ಸೇವಾವ್ರತಿಗಳು, ಆಡಳಿತ ಮಂಡಳಿ, ಸಂಘದ ಸ್ಥಾನೀಯ ಕಾರ್ಯಕರ್ತರು, ಹಿತೈಷಿಗಳು, ಪ್ರತಿಷ್ಠಾನದ ಬಳಗದ ಕಾರ್ಯಕರ್ತರು. ಜೊತೆ ಸೇರಿ ಯೋಜನೆ ಮಾಡಿದರು. ಯಾರು ಎಲ್ಲೆಲ್ಲಿ ಸಂದರ್ಶನಕ್ಕೆ ಹೋಗಬೇಕು ಎಂಬುದನ್ನು ನಿಶ್ಚಯಿಸ ಲಾಯಿತು.

ಅಭಿಯಾನದಲ್ಲಿ ಮನೆ ಮನೆಗಳಿಗೆ ತೆರಳಿ ಕರಪತ್ರ ಹಂಚುವುದು, ಯುವತಿಯರನ್ನು ಭೇಟಿ ಮಾಡಿ ಹಿಂದು ಸೇವಾ ಪ್ರತಿಷ್ಠಾನ ಪರಿಚಯ ಹಾಗೂ ಸೇವಾವ್ರತಿ ಕಲ್ಪನೆ ಕಾರ್ಯಮಾಡಿದ ಸೇವಾವ್ರತಿಗಳ ಸಾಧನೆ ತಿಳಿಸಿಕೊಡಲಾಯಿತು.

ಬಿಜಾಪುರ ಜಿಲ್ಲೆಯ ತಾಳಿಕೋಟೆಯಲ್ಲಿ ಆಗಸ್ಟ್ 31ರಂದು ಮಧ್ಯಾಹ್ನ 3ರಿಂದ ಸಂಜೆ 5.30ರವರೆಗೆ 15 ವಾರ್ಡ್‌ಗಳಲ್ಲಿ ಬಾಲಭಾರತೀಯ ಶಾಲೆಯ ಶಿಕ್ಷಕ ಶಿಕ್ಷಕಿಯರು ಸೇರಿದಂತೆ 40 ಜನರು 500 ಮನೆಗಳನ್ನು ಸಂಪರ್ಕಿಸಿ ಕರಪತ್ರ ಹಂಚಿ ಅರಿವು ಮೂಡಿಸಿದರು.

ಸ್ಥಾನೀಯ ಪತ್ರಿಕೆಗಳಲ್ಲಿ ಸುದ್ದಿ, ಜಾಹಿರಾತು ಹಾಗೂ ವೈಯಕ್ತಿಕ ಸಂಪರ್ಕ ಈ ರೀತಿಯಲ್ಲಿ ಪ್ರಯತ್ನ ಹಾಕಲಾಯಿತು. ಉಪ್ಪಿನಂಗಡಿ, ಉಜಿರೆ, ಶಿರಸಿ, ಬೀದರಗಳಲ್ಲಿ ಸಂದರ್ಶನಕ್ಕೆ ದೊಡ್ಡ ಸಂಖ್ಯೆ ಯಲ್ಲಿ ಭಾಗವಹಿಸಿದ್ದು ವಿಶೇಷ. ಉಜಿರೆಯಲ್ಲಿ ಸುರಿಯುವ ಮಳೆ ನಡುವೆಯು ಸಂದರ್ಶನಕ್ಕೆ ಬಂದರು. ಉಪ್ಪಿನಂಗಡಿಯಲ್ಲಿ ನೂರಾರು ಜನ ಅರ್ಜಿಸಲ್ಲಿಸಿ ಹೆಸರು ನೊಂದಾಯಿಸಿಕೊಂಡು ಸಂದರ್ಶನದ ದಿನ ಮಧ್ಯಾಹ್ನ 1 ಗಂಟೆಯಿಂದ ಸೇವಾವ್ರತಿ ಆಕಾಂಕ್ಷಿಗಳು ಬಂದಿದ್ದರು. ಶಿರಸಿ, ಬೀದರ ಗಳಲ್ಲಿ ಚೆನ್ನಾಗಿ ಸ್ಪಂದಿಸಿದರು. ಸೇವಾವ್ರತಿ ಆಕಾಂಕ್ಷಿಗಳ ಜೊತೆ ಪಾಲಕರು 75%ರಷ್ಟು ಪಾಲ್ಗೊಂಡಿದ್ದು ವಿಶೇಷ.

ಮೊಟ್ಟಮೊದಲ ಬಾರಿಗೆ ಪ್ರಾಂತದಲ್ಲಿ ಒಟ್ಟು 31 ಕಡೆ ಸಂದರ್ಶನ ನಡೆಯಿತು. ರಿಪ್ಪನ್ ಪೇಟೆಯಲ್ಲಿ ಸಂಘದ ಕಾರ್ಯಕರ್ತರು ಜಾಹಿರಾತು ಯಾವುದನ್ನು ಬಳಸದೆ ವೈಯಕ್ತಿಕ ಸಂಪರ್ಕದ ಮೂಲಕ ಅತ್ಯಂತ ದೊಡ್ಡ ಪ್ರಮಾಣದಲ್ಲಿ ಸೇವಾ ಕಾರ್ಯದ ಪರಿಚಯ ಮಾಡಿಕೊಟ್ಟರು.

ಈ ಎಲ್ಲದರ ಪರಿಣಾಮ ಈ ವರ್ಷದ ಸೇವಾ ವ್ರತಿ ತರಬೇತಿ ಶಿಬಿರದಲ್ಲಿ 20 ಜಿಲ್ಲೆಗಳಿಂದ 120 ಜನ ಯುವತಿಯರು ಭಾಗವಹಿಸಿದ್ದಾರೆ. ಅದರಲ್ಲಿ 108 ಯುವತಿಯರು ಸಂದರ್ಶನದಲ್ಲಿ ಭಾಗವಹಿಸಿದವರು. 12 ಯುವತಿಯರು ಮಾತ್ರ ನೇರ ಶಿಬಿರಕ್ಕೆ ಬಂದವರು. 95 ಯುವತಿಯರು ಕನಿಷ್ಠ 1 ವಾರ/10 ದಿನಗಳ ಕಾಲ ಸೇವಾವ್ರತಿಗಳ ಜೊತೆ ಕಾರ್ಯಕ್ಷೇತ್ರದಲ್ಲಿದ್ದು ಬಂದವರು. ಆದ್ದರಿಂದ ನಿಜವಾಗಿ ಸೇವೆಯಲ್ಲಿ ಆಸಕ್ತಿಯಿದ್ದವರು ಮಾತ್ರ ಶಿಬಿರಕ್ಕೆ ಬರುವಂತಾಯಿತು.

ಹೀಗೆ ಗುಣಮಟ್ಟದ ಸೇವಾವ್ರತಿಗಳು ತಯಾರಾಗಬೇಕು, ಹೆಚ್ಚಿನ ಸ್ಥಾನಗಳಲ್ಲಿ ಸಂದರ್ಶನ ನಡೆಯಬೇಕು. ಸ್ಥಾನೀಯರು ಹೆಚ್ಚು ಪ್ರಯತ್ನ ಹಾಕಬೇಕು, ಪ್ರತಿಷ್ಠಾನದ 'ಸೇವಾವ್ರತಿ' ಕಾರ್ಯ ಹಾಗೂ ವಿವಿಧ ಸೇವಾ ಆಯಾಮಗಳ ಪರಿಚಯವಾಗಬೇಕು ಎಂಬ ಉದ್ದೇಶದಿಂದ ಸೇವಾವ್ರತಿ ಅಭಿಯಾನ ಪ್ರತಿಷ್ಠಾನದ ಎಲ್ಲ ಹಂತದ ಕಾರ್ಯಕರ್ತರಿಗೂ ವಿಶ್ವಾಸ ತಂದುಕೊಟ್ಟಿದೆ.

| | |
|---|---|
| **ಸಂದರ್ಶನ ನಡೆದ ಸ್ಥಾನಗಳು** | **31** |
| **ಪಾಲ್ಗೊಂಡಿದ್ದವರು** | **463** |
| **ಆಯ್ಕೆಯಾದವರು** | **342** |
| **ಶಿಬಿರಕ್ಕೆ ಬಂದವರು** | **110** |

## ದಸರಾ ಸಾಂಸ್ಕೃತಿಕ ಉತ್ಸವದಲ್ಲಿ ಮಿಂಚಿದ ನೆಲೆ ಮಕ್ಕಳು



ಮಯೂರ ನೃತ್ಯ




ಬಾನಿನಲ್ಲಿ ಮೂಡಿಬಂದ ಚಂದಮಾಮ ಗೀತೆಗೆ ನೃತ್ಯ

ಹಬ್ಬ ಹರಿದಿನ

# ದೀಪಾವಳಿ

**ಅಸತೋಮಾ ಸದ್ಗಮಯ**
**ತಮಸೋಮಾ ಜ್ಯೋತಿರ್ಗಮಯ**
**ಮೃತ್ಯೋರ್ಮಾ ಅಮೃತಂಗಮಯ**

ಎಂಬ ಉಪನಿಷತ್ ವಾಣಿಯಂತೆ ನಮ್ಮನ್ನು ಕತ್ತಲೆಯಿಂದ ಬೆಳಕಿನೆಡೆಗೆ, ಮೃತ್ಯುವಿನಿಂದ ಅಮೃತತ್ವದೆಡೆಗೆ ಒಯ್ಯುವ ಬೆಳಕಿನ ಹಬ್ಬವೇ ದೀಪಾವಳಿ. ದೀಪಾವಳಿ ಮೂರು ದಿನಗಳ ಹಬ್ಬ. ನರಕಚತುರ್ದಶಿ, ಅಮಾವಾಸ್ಯೆ ಮತ್ತು ಬಲಿಪಾಡ್ಯಮಿ.

**ನರಕಚತುರ್ದಶಿ**

ದ್ವಾಪರ ಯುಗದಲ್ಲಿ ನರಕಾಸುರನೆಂಬ ರಾಕ್ಷಸರಾಜ ಕಾಮರೂಪ(ಈಗಿನ ಅಸ್ಸಾಂ)ವನ್ನಾಳುತ್ತಿದ್ದ. ಪ್ರಾಗ್ಜ್ಯೋತಿಷಪುರ ಅವನ ರಾಜಧಾನಿ. ಮಹಾಬಲಿಷ್ಠನಾದ ಈತನು ಬ್ರಹ್ಮನ ವರಬಲದಿಂದ ದೇವತೆಗಳನ್ನೆಲ್ಲಾ ಜಯಿಸಿ ಭೂಲೋಕದ ರಾಜರನ್ನೆಲ್ಲಾ ಗೆದ್ದು ಅವರ 16,000 ಕನ್ಯೆಯರನ್ನು ಸೆರೆಯಲ್ಲಿಟ್ಟಿದ್ದ. ತ್ವಷ್ಟೃವಿನ ಮಗಳಾದ ಚತುರ್ದಶಿಯನ್ನು ಅಪಹರಿಸಿದ್ದ. ದೇವತೆಗಳ ಪ್ರಾರ್ಥನೆಯ ಮೇರೆಗೆ ಶ್ರೀಕೃಷ್ಣನು ನರಕಾಸುರನನ್ನು ಆಶ್ವಯುಜ ಬಹುಳ ಚತುರ್ದಶಿಯ ದಿನ ನಡುರಾತ್ರಿಯಲ್ಲಿ ಸಂಹರಿಸಿದ. ಹೀಗೆ ಈ ಘಟನೆಯನ್ನು ನೆನಪಿಸುವ ದಿನವೇ ನರಕಚತುರ್ದಶಿ.

ಇಲ್ಲಿ ಸಾಂಕೇತಿಕವಾದ ಅರ್ಥವನ್ನು ಕಾಣಬಹುದು. ನರಕ ಎಂದರೆ ಸಾಮಾನ್ಯವಾಗಿ ಕತ್ತಲೆ ಕಷ್ಟ, ಪೀಡೆ, ಅಜ್ಞಾನ ಎಂದು ಅರ್ಥ ಮಾಡಬಹುದು. ಸಜ್ಜನರ ರಕ್ಷಣೆಗಾಗಿ ಅವತರಿಸಿದ ಶ್ರೀಕೃಷ್ಣ ಅಜ್ಞಾನಾಂಧಕಾರ ರೂಪದ ನರಕನನ್ನೇ ನಿಗ್ರಹಿಸಿದ. ಹಾಗೆಯೇ 'ಚತುರ್ದಶಿ' ಎನ್ನುವುದು ವಿದ್ಯೆಗೆ ಸಹ ಪರ್ಯಾಯವಾದ ಇನ್ನೊಂದು ಹೆಸರು. ರಕ್ಷಾ, ಕಲಾ, ವ್ಯಾಕರಣ, ನಿರುಕ್ತ, ಜ್ಯೋತಿಷ್ಯ, ಛಂದಸ್ಸು, ನಾಲ್ಕು ವೇದಗಳು, ಧರ್ಮಶಾಸ್ತ್ರ, ಪುರಾಣ, ಮೀಮಾಂಸೆ, ತರ್ಕಗಳನ್ನು ಹದಿನಾಲ್ಕು ವಿದ್ಯೆಗಳು ಎಂದು ಕರೆಯಲಾಗಿದೆ. ಆದ್ದರಿಂದ ಅಜ್ಞಾನ ಕಳೆದು ಈ ಹದಿನಾಲ್ಕು ವಿದ್ಯೆಗಳನ್ನು ಪ್ರಸಾರ ಮಾಡಿದ ದಿನವೆಂದು ಈ ದಿನವನ್ನು ಅರ್ಥೈಸಬಹುದು. ಜ್ಞಾನದ ಸಂಕೇತವಾಗಿ ದೀಪವನ್ನು ಬೆಳಗಿಸುವ ಪದ್ಧತಿ ಬೆಳೆದು ಬಂದಿರಬಹುದು.

**ದೀಪಾವಳಿ – ಅಮಾವಾಸ್ಯೆ**

ಇದು ವಿಷ್ಣು – ಲಕ್ಷ್ಮೀಯರ ವಾರ್ಷಿಕ ಪುನರ್ಮಿಲನದ ದಿನ. ಆದ್ದರಿಂದ ಈ ದಿನ ಲಕ್ಷ್ಮೀಪೂಜೆಗೆ ಅತ್ಯಂತ ಪ್ರಶಸ್ತವಾದ ಮಹೂರ್ತ. ಲಕ್ಷ್ಮೀಪೂಜೆಗಾಗಿ ಮನೆ, ಅಂಗಡಿಗಳನ್ನೆಲ್ಲಾ ಸಿಂಗರಿಸುವುದರಿಂದ ಈ ಹಬ್ಬ ಸಾಮಾಜಿಕ–ಧಾರ್ಮಿಕ ಎರಡೂ ದೃಷ್ಟಿಯಿಂದ ವಿಶೇಷ ಮಹತ್ವದ್ದಾಗಿದೆ. ಸದ್ವಿದ್ಯೆಗಳು ಎಲ್ಲೆಡೆ ನೆಲೆಸಿದಾಗ ಸಮೃದ್ಧಿಯು ತಾನಾಗಿಯೇ ಬರುತ್ತದೆ. ಅದೇ ಲಕ್ಷ್ಮೀಪೂಜೆ.

**ಬಲಿಪಾಡ್ಯಮಿ**

ಕಾರ್ತಿಕ ಶುದ್ಧ ಪ್ರತಿಪದೆಯ ದಿನ ಮಹಾವಿಷ್ಣು ವಾಮನನ ಅವತಾರ ತಾಳಿ, ಬಲಿ ಚಕ್ರವರ್ತಿಯನ್ನು ಪಾತಾಳಕ್ಕೆ ಅಟ್ಟಿದನೆಂಬ ಪೌರಾಣಿಕ ಕಥೆ ಸುಪ್ರಸಿದ್ಧ.

ಈ ದಿನ ಬಲಿಯ ನೆನಪಿಗಾಗಿ ಹಿಟ್ಟಿನ ಇಲ್ಲವೇ ಗೋಮಯದ ಬಲಿಯ ಮೂರ್ತಿಮಾಡಿ ಪೂಜಿಸುತ್ತಾರೆ. ಹೊಲದಲ್ಲಿ ಕೈಗೆ ಬಂದ ರಾಗಿ, ಭತ್ತ, ಗೋಧಿ, ಕಬ್ಬು ಮುಂತಾದವುಗಳ ತೆನೆಗಳನ್ನು ಹೂ ಮುಡಿಸಿ ಪೂಜಿಸುತ್ತಾರೆ. ಈ ದಿನ ಶ್ರೀಕೃಷ್ಣನು ಗೋವರ್ಧನ ಗಿರಿಯನ್ನೇ ಎತ್ತಿ ಹಿಡಿದ ದಿನ ಎನ್ನಲಾಗುತ್ತದೆ. ಆದ್ದರಿಂದಲೇ ಇಂದು ಗೋವುಗಳನ್ನು ಅಲಂಕರಿಸಿ, ಹಾಲು ಹಿಂಡುವ ಪಾತ್ರೆ, ಕಡೆಗೋಲುಗಳನ್ನು ಪೂಜಿಸಿ, ಗೋಶಾಲೆಗಳನ್ನು ದೀಪಗಳಿಂದ ಬೆಳಗಿ ಹಸುಗಳಿಗೆ ಅಕ್ಕಿ, ಬೆಲ್ಲ ಮುಂತಾದ ತಿಂಡಿ ತಿನಿಸುಗಳನ್ನು ನೀಡಿ ಹಬ್ಬ ಆಚರಿಸುವುದು ವಾಡಿಕೆ.

ವಿಗ್ರಹ ರೂಪದ ದೇವರ ಪೂಜೆ ಹಾಗೂ ಪ್ರಕೃತಿಯ ಭಾಗವಾದ ಗೋವಿನ ಪೂಜೆ – ಹೀಗೆ ವಿಶಿಷ್ಟ ಸಮಾಗಮವನ್ನು ದೀಪಾವಳಿಯಲ್ಲಿ ಕಾಣಬಹುದು.

**(ಆಧಾರ : ಪ್ರೊ| ವಿದ್ವಾನ್ ವಿ.ಎನ್ ಭಟ್, ಬೆತ್ತಗೇರಿ ಅವರ ಪುಸ್ತಕ)**

ಬಾಲದೀವಿಗೆ

# ಮನುಷ್ಯ ಪ್ರಯತ್ನ

ಅದೊಂದು ನದಿಯ ದಡದಲ್ಲಿರುವ ಊರು. ಅಲ್ಲೊಬ್ಬ ಮಹಾದೈವಭಕ್ತನಿದ್ದ. ತುಂಬಾ ಜ್ಞಾನ ಸಂಪಾದಿಸಿದ್ದ. ದೇವರಲ್ಲಿ ಅಚಲ ವಿಶ್ವಾಸ ಅವನಿಗೆ. ಒಮ್ಮೆ ಆ ಊರಿಗೆ ಪ್ರವಾಹ ಬಂದಿತು. ನದಿಯ ನೀರು ಊರೊಳಗೆ ನುಗ್ಗಿತು. ಊರವರೆಲ್ಲಾ ಗಂಟುಮೂಟೆ ಕಟ್ಟಿ ಮನೆ ಖಾಲಿ ಮಾಡತೊಡಗಿದರು.

ಆ ಮಹಾಭಕ್ತನ ಪಕ್ಕದ ಮನೆಯಾತ ಬಂದು ಆ ಭಕ್ತನಿಗೆ ಹೇಳಿದ, "ಮಹಾಸ್ವಾಮೀ ಮನೆ ಖಾಲಿ ಮಾಡಿ ಹೊರಡಿ. ಇಲ್ಲದಿದ್ದರೆ ನೀರು ಮನೆ ಮುಳುಗಿಸುತ್ತದೆ." ಭಕ್ತ ಹೇಳಿದ "ನಾನು ದೇವರನ್ನು ನಂಬಿದವ. ದೇವರು ನನ್ನನ್ನು ಕೈಬಿಡಲಾರ. ಅವನೇ ನನ್ನನ್ನು ನೋಡಿಕೊಳ್ಳುತ್ತಾನೆ" ಎಂದು.

ಸ್ವಲ್ಪ ಹೊತ್ತಿಗೆ ನೀರು ಮನೆಗೆ ನುಗ್ಗಿತು. ಆ ಭಕ್ತ ಉಪ್ಪರಿಗೆ ಹತ್ತಿ ಕುಳಿತ. ಒಂದಿಷ್ಟು ಜನ ತೆಪ್ಪವನ್ನು ಕಟ್ಟಿ ಅದರಲ್ಲಿ ಕುಳಿತು ಹೋಗುತ್ತಿದ್ದರು. ಇವನನ್ನು ನೋಡಿ ಕರೆದರು, "ಬನ್ನಿ ಸ್ವಾಮೀ ನಮ್ಮ ಜೊತೆಗೆ, ದಡ ದಾಟಿಸುತ್ತೇವೆ" ಎಂದು. ಆ ಭಕ್ತ ಹೇಳಿದ, "ಇಲ್ಲ ನನ್ನ ದೇವರಿದ್ದಾನೆ. ನನ್ನನ್ನು ರಕ್ಷಿಸುತ್ತಾನೆ. ನೀವು ಹೋಗಿ" ಎಂದು. ಸರಿ ಪ್ರವಾಹದ ನೀರಿನ ಮಟ್ಟ ಇನ್ನೂ ಮೇಲೇರಿತು. ಆ ಭಕ್ತ ಉಪ್ಪರಿಗೆ ಮೇಲಿದ್ದ ಒಂದು ದೊಡ್ಡ ಕಂಬ ಏರಿ ಕುಳಿತ. ಅಷ್ಟು ಹೊತ್ತಿಗೆ ಇಡೀ ಊರಿಗೆ ಊರೇ ಮುಳುಗಿತ್ತು. ಜನರೆಲ್ಲಾ ಅವರವರ ಸಾಮಾನುಗಳನ್ನು ಕಟ್ಟಿಕೊಂಡು ಊರು ಬಿಟ್ಟು ಹೊರಟು ಹೋಗಿದ್ದರು.

ಇನ್ನೂ ಯಾರಾದರೂ ನೀರಿನಲ್ಲಿ ಸಿಕ್ಕಿರುವರೇನೋ ನೋಡೋಣವೆಂದು ಯುವಕರು ಒಂದು ದೊಡ್ಡ ದೋಣಿಯನ್ನು ತೆಗೆದುಕೊಂಡು ಬಂದರು. ಕಂಬದ ಮೇಲೇರಿ ನಡುಗುತ್ತಾ ಕುಳಿತುಕೊಂಡಿದ್ದ ಈ ಮಹಾಭಕ್ತನನ್ನು ನೋಡಿ ಅವನ ಬಳಿಗೆ ದೋಣಿ ತೆಗೆದುಕೊಂಡು ಬಂದು ದೋಣಿಯನ್ನು ಹತ್ತುವಂತೆ ಅವನಿಗೆ ಹೇಳಿದರು. ಆಗಲೂ ಆ ಭಕ್ತ ನಡುಗುತ್ತಲೇ "ಇಲ್ಲ ಇಲ್ಲ ನಾನು ದೇವರನ್ನು ಪೂರ್ತಿಯಾಗಿ ನಂಬಿದ್ದೇನೆ. ಆ ದೇವರು ಬಂದು ನನ್ನನ್ನು ರಕ್ಷಿಸಲೇಬೇಕು. ನೀವಿನ್ನು ಹೊರಡಿ" ಎಂದ. ಎಷ್ಟು ಒತ್ತಾಯ ಮಾಡಿದರೂ ಕಂಬ ಬಿಟ್ಟು ಇಳಿಯಲೇ ಇಲ್ಲ. ಹತಾಶರಾದ ಯುವಕರು ಅವನನ್ನು ಅಲ್ಲೇ ಬಿಟ್ಟು ಹೊರಟು ಹೋದರು. ಅಷ್ಟರಲ್ಲೇ, ದೊಡ್ಡ ಅಲೆಯೊಂದು ಬಂದು ಆ ಭಕ್ತನನ್ನು ಕೊಚ್ಚಿಕೊಂಡು ಹೋಯಿತು.

ಸತ್ತ ಆ ಭಕ್ತನನ್ನು ದೇವದೂತರು ದೇವರ ಬಳಿ ಕರೆದೊಯ್ದರು. ಆ ಭಕ್ತ ದೇವರನ್ನು ನೋಡಿದ ಕೂಡಲೇ ಪ್ರಶ್ನಿಸಿದ, "ದೇವಾ, ನಾನು ನಿನ್ನನ್ನೆಷ್ಟು ನಂಬಿದ್ದೆ. ನೀನು ಬಂದು ನನ್ನನ್ನು ರಕ್ಷಿಸುತ್ತೀ ಎಂದು. ಆದರೆ ನೀನು ಬರಲೇ ಇಲ್ಲ. ಕೊನೆಗೂ ನಾನು ಸಾಯುವಂತಾಯಿತು. ಇದೇನಾ ನಿನ್ನ ಭಕ್ತರ ಮೇಲಿನ ಪ್ರೀತಿ?" ಎಂದು. ಆಗ ದೇವರು ನಗುತ್ತಾ ಹೇಳಿದ. "ಅಯ್ಯೋ ಮೂರ್ಖ! ನಾನು ನಿನ್ನನ್ನು ರಕ್ಷಿಸಲೆಂದೇ ಪದೇ ಪದೇ ಬಂದೆ. ನಿನ್ನ ನೆರೆಮನೆಯವನ ರೂಪದಲ್ಲಿ ಬಂದೆ. ತೆಪ್ಪದವರ ರೂಪದಲ್ಲಿ ಬಂದೆ. ದೋಣಿಯಲ್ಲಿ ಯುವಕರ ರೂಪದಲ್ಲಿ ಬಂದೆ. ಆದರೆ ನೀನೇ ನನ್ನನ್ನು ಗುರುತಿಸಲಿಲ್ಲ. ನಿನ್ನ ಪ್ರಯತ್ನವನ್ನು ನೀನು ಮಾಡದೆ ನನ್ನನ್ನು ದೂಷಿಸಿದರೆ ಫಲವೇನು?" ಎಂದ. ಆಗ ಆ ಭಕ್ತನಿಗೆ ಜ್ಞಾನೋದಯವಾಯಿತು.

ಒಮ್ಮೆ ಮಹಾನ್ ಸಾಧಕರ ಜೀವನವನ್ನೂ, ಅವರು ಪಟ್ಟ ಕಷ್ಟಗಳನ್ನೂ ನೋಡಿದಾಗ ಅವರೇನೂ ಸುಲಭವಾಗಿ ಆ ಸ್ಥಾನ ತಲುಪಿಲ್ಲವೆನ್ನುವುದು ಗೊತ್ತಾಗುತ್ತದೆ. ಆದರೂ ಬಂದ ಎಲ್ಲ ಅಡೆತಡೆಗಳನ್ನು ಮೀರಿ ಸಾಧಿಸುವ ಹಟ, ಛಲಗಳನ್ನು ಹೊಂದಿ ತಮ್ಮಲ್ಲಿ ಅಚಲ ವಿಶ್ವಾಸವನ್ನು ಹೊಂದಿ ಜೊತೆಗೆ ದೇವರಲ್ಲೂ ವಿಶ್ವಾಸ ಹೊಂದಿರುವುದನ್ನು ನಾವು ಅವರ ಜೀವನ ಚರಿತ್ರೆಗಳನ್ನು ಓದಿದಾಗ ಕಾಣಬಹುದು. ಮನುಷ್ಯ ಪ್ರಯತ್ನವೇ ಇಲ್ಲದೇ ದೇವರ ಮೇಲೆ ಭಾರ ಹಾಕುವವನು ಸಾಧಕನಲ್ಲ, ಸೋಮಾರಿ ಅಷ್ಟೇ! ಮನುಷ್ಯ ಪ್ರಯತ್ನದಿಂದ ಏಕಲವ್ಯ ಅಪ್ರತಿಮ ಬಿಲ್ಲಾಳಾದ. ವಿಶ್ವಾಮಿತ್ರರು ರಾಜರ್ಷಿಯಿಂದ ಬ್ರಹ್ಮರ್ಷಿ ಸ್ಥಾನಕ್ಕೇರಿದರು. ಆದ್ದರಿಂದಲೇ ತಿಳಿದವರು ಹೇಳುತ್ತಾರೆ, "ಮನಸ್ಸಿದ್ದರೆ ಮಾರ್ಗ" ಎಂದು.



# ನೀವೂ ಓದಿ

> ಸಂಸ್ಕೃತ ಸಂಭಾಷಣೆಯ ಸರಳ ವಿಧಾನದಿಂದ ಆಕರ್ಷಿತರಾಗಿ ಈಗ 37 ದೇಶಗಳ ಜನರು ಸಂಸ್ಕೃತ ಭಾರತಿಯ ಸಹಯೋಗದಲ್ಲಿ ಸಂಸ್ಕೃತ ಅಭ್ಯಾಸದಲ್ಲಿ ತೊಡಗಿದ್ದಾರೆ.

## ನಾ ಹೇಗೆ ಹಿಂದುವಾದೆ

'ಬೇರುಗಳು ಭದ್ರವಾಗಿ ಭೂಮಿಯಲ್ಲಿರಬೇಕು, ಕೊಂಬೆಗಳು ಆಕಾಶದೆತ್ತರಕ್ಕೂ, ಜಗತ್ತಿನಾದ್ಯಂತಕ್ಕೂ ಹರಡಬೇಕು, ಸಾವಿರಾರು ಜೀವಿಗಳಿಗೆ ಆಶ್ರಯವಾಗಬೇಕು' ಇದಲ್ಲವೇ ಜೀವಸೆಲೆ!! ಭಾರತದ ಜೀವಸೆಲೆ ಸಂಸ್ಕೃತಿ, ಧಾರ್ಮಿಕತೆ, ಆಧ್ಯಾತ್ಮ, ಮರವಾಗಿ ನಿಂತದ್ದು ವೇದಗಳು. ಇವುಗಳಲ್ಲಿನ ನಂಬಿಕೆಯ ಭದ್ರಬುನಾದಿಯ ಮೇಲೆ ಮಾತ್ರ ಭಾರತ ಸ್ವತಂತ್ರವಾಗಿ ನಿಲ್ಲಬಲ್ಲದು.

ಪಾಶ್ಚಾತ್ಯ ಸಂಸ್ಕೃತಿಗೂ, ಬಾಹ್ಯಾಚರಣೆಗೂ ಮರುಳಾಗಿ ಮಾನಸಿಕ ಪರಾವಲಂಬನೆಯನ್ನು ಹೊಂದುತ್ತಿರುವ ನಾವು ಪುರಾತನ ಆಚರಣೆಗಳ ವೈಜ್ಞಾನಿಕ ಕಾರಣಗಳನ್ನು ಮಕ್ಕಳಿಗೆ ತಿಳಿಹೇಳುವಲ್ಲಿ ಸೋಲುತ್ತಾ ಇಂದಿನ ಮಕ್ಕಳನ್ನೂ ಬೌದ್ಧಿಕ ಪರಾವಲಂಬನೆಗೆ ಸಿದ್ಧಗೊಳಿಸುತ್ತಿದ್ದೇವೆ.

ಇಂತಹ ಸಂದರ್ಭದಲ್ಲಿ, ಮೂಲತಃ ಕ್ರಿಶ್ಚಿಯನ್ ಕುಟುಂಬದಲ್ಲಿ ಅದರಲ್ಲೂ ಪಾಶ್ಚಾತ್ಯ ದೇಶದಲ್ಲಿ ಜನಿಸಿ ಭಾರತೀಯನಾಗಲು ಅರ್ಥಾತ್ ಹಿಂದುವಾಗಲು ಹೊರಟು ಸಾರ್ಥಕತೆಯ ಮನೋಭಾವನೆ ಹೊಂದಿದ ಡೇವಿಡ್ ಫ್ರಾಲಿ(ವಾಮದೇವ ಶಾಸ್ತ್ರಿ)ಯವರ ಆಧ್ಯಾತ್ಮ ಪಯಣದ ಕಥನ ತುಂಬಾ ಮಹತ್ವದ್ದೆನಿಸುತ್ತದೆ. ಅಂತಹ ಕಥನವೇ **"ನಾ ಹೇಗೆ ಹಿಂದುವಾದೆ"** ಪುಸ್ತಕ. ಪಯಣ **"ಹೇಗೆ?"** ಎಂಬುದರ ಜೊತೆಗೆ **"ಏಕೆ?"** ಎಂಬುದನ್ನು ವಿವರಿಸುವ ರೀತಿ ವೈಜ್ಞಾನಿಕವೂ, ಸಮಂಜಸವೂ, ಸರ್ವಸಮ್ಮತವಾಗುವಂಥದ್ದೂ ಆಗಿದೆ. ಹಿಂದುಗಳಾದವರೂ ತಪ್ಪುತಿಳುವಳಿಕೆಯಿಂದ ಬೇರೆ ಧಾರ್ಮಿಕ ನಂಬಿಕೆಗಳೆಡೆ ವಾಲುತ್ತಿರುವಾಗ ಪ್ರಪಂಚದಲ್ಲಿ ಅತ್ಯಂತ ವೈಜ್ಞಾನಿಕವಾದದ್ದು ಸನಾತನ ಧರ್ಮವೊಂದೇ ಎಂದು ಇತ್ತ ಮುಖಮಾಡಿರುವ ಫ್ರಾಲಿಯವರ ಹಿನ್ನೆಲೆ ಗಮನಿಸಿದಾಗ ಹಲವು ಆಶ್ಚರ್ಯಗಳು ಉಂಟಾಗುತ್ತವೆ.

ಕ್ಯಾಥೋಲಿಕ್ ಕ್ರಿಶ್ಚಿಯನ್ ಕುಟುಂಬದಲ್ಲಿ ಜನಿಸಿದ ಫ್ರಾಲಿಯವರೇ ಹೇಳಿಕೊಳ್ಳುವಂತೆ ಚರ್ಚಿನ ಎಷ್ಟೋ ಆಚರಣೆಗಳು ಪ್ರಶ್ನಾರ್ಹವಾಗಿದ್ದವು ಮತ್ತು ಅವೈಜ್ಞಾನಿಕವಾಗಿದ್ದವು. ಕ್ಯಾಥೋಲಿಕ್ ಪಂಥದಾಚೆಗೆ ಬೆಳೆಯುವಲ್ಲಿ ತಾವು ಅನುಭವಿಸಿದ ಗೊಂದಲ, ಉತ್ತರ ಕಂಡುಕೊಂಡ ಬಗೆಯನ್ನು ಹಂತಹಂತವಾಗಿ ಅವರು ಈ ಪುಸ್ತಕದಲ್ಲಿ ನಿರೂಪಿಸಿದ್ದಾರೆ. 'ಶಾಲೆಯಲ್ಲಿ ವಿಜ್ಞಾನ, ಇತಿಹಾಸ, ಖಗೋಳದ ಅಧ್ಯಯನ ಮಾಡುತ್ತಾ ವಿಶ್ವದ ಬಗೆಗಿನ ಕಲ್ಪನೆಗಳು ಗಮನಾರ್ಹವಾಗಿ ಬದಲಾದವು. ವಿಜ್ಞಾನದ ದೃಷ್ಟಿಕೋನದಿಂದ ನೋಡಿದರೆ, ಚರ್ಚಿನಲ್ಲಿ ಹೇಳಿಕೊಟ್ಟ ಬ್ರಹ್ಮಾಂಡದ ಕಲ್ಪನೆ ತುಂಬಾ ಕಿರಿದಾಗಿಯೂ, ಹಿಂದುಳಿದದ್ದೂ ಎಂದು ತಿಳಿಯಿತು' ಹೀಗೆ ವಿವರಿಸುತ್ತಾ ಫ್ರಾಲಿಯವರು ತಾವು ನಿಧಾನವಾಗಿ ಚರ್ಚಿನಿಂದ ದೂರಾದುದನ್ನು ಹೇಳುತ್ತಾರೆ. ಇಂತಹ ವಾತಾವರಣದಲ್ಲಿ ಬೆಳೆದ ಫ್ರಾಲಿಯವರು ವಿಭಿನ್ನವಾಗಿ ಚಿಂತಿಸುತ್ತಾರೆ. ಅವರವರ ಪೂಜಾವಿಧಾನ ಅವರವರಿಗಿರಲಿ. ದೇವರು ಒಬ್ಬನೇ, ಆದರೆ ಅವನಿಗೆ ಹಲವು ರೂಪ ಎನ್ನುವುದನ್ನು ಅವರು ಒಪ್ಪುತ್ತಾರೆ. ಆದ್ದರಿಂದ, ಜಗತ್ತಿನ ಎಲ್ಲ ಜನರೂ ಒಂದೇ ಮತವನ್ನು ಅನುಸರಿಸುವ ಅವಶ್ಯಕತೆ ಇಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಭಾರತಕ್ಕೆ ಭೇಟಿ ಕೊಡುವ ಮೊದಲೇ ಇಲ್ಲಿನ ಜ್ಞಾನಪರಂಪರೆಯ ತುಲನಾತ್ಮಕ ಅಧ್ಯಯನವನ್ನು ಇವರು ಕೈಗೊಂಡಿದ್ದಾರೆ. ಜೀವಂತ ಭಾಷೆಯಾದ ಸಂಸ್ಕೃತವನ್ನು ಅಭ್ಯಾಸಮಾಡಿ ವೇದ, ಉಪನಿಷತ್ತುಗಳನ್ನು ಅರಿಯಲು ಶ್ರಮಿಸಿದ್ದಾರೆ. ತನ್ನ ಜ್ಞಾನದಾಹ ತಣಿಕೆಗಾಗಿ ಹಲವು ಮೂಲ ಗ್ರಂಥಗಳನ್ನು, ಋಷಿಪರಂಪರೆಯ ಹಲವು ಪ್ರಮುಖರ ಸಂಪರ್ಕವನ್ನೂ ಬೆಳೆಸಿಕೊಂಡರು. ಹಿಂದು ಧರ್ಮದ ಭದ್ರಬುನಾದಿಯಾದ ವೇದಗಳೇ ಮುಕ್ತ ಸತ್ಯಾನ್ವೇಷಣೆಗೆ ಅವಕಾಶ ನೀಡಿವೆ. ಅನುಭವಕ್ಕೆ ಬಾರದ ಯಾವುದನ್ನೂ ನಂಬುವ ಅಗತ್ಯವಿಲ್ಲವೆಂದು ವೇದಗಳೇ ಹೇಳುತ್ತವೆ. ಈ ಅಂಶವೇ ಫ್ರಾಲಿಯವರನ್ನು ಪ್ರೇರೆಪಿಸಿದ್ದೆಂಬುದು ಅವರ ಬರವಣಿಗೆಯಿಂದ ತಿಳಿದುಬರುತ್ತದೆ. ಭಾರತೀಯರ ಪೂಜಾವಿಧಾನ, ಆಹಾರಪದ್ಧತಿ, ದೈನಂದಿನ ಚಟುವಟಿಕೆಗಳು, ಜನ್ಮಾಂತರದ ನಂಬಿಕೆ ಎಲ್ಲವೂ ಪರೋಕ್ಷವಾಗಿ, ಪ್ರತ್ಯಕ್ಷವಾಗಿ ಆಧ್ಯಾತ್ಮಿಕ ಹಿನ್ನಲೆಯನ್ನು ಹೊಂದಿರುವುದನ್ನು ಅರಿತ ಫ್ರಾಲಿಯವರು ಕೇವಲ ಆಚರಣೆಗೆ ಮಾತ್ರವಲ್ಲದೆ ತಮ್ಮ ಆಧ್ಯಾತ್ಮ ಉನ್ನತಿಗಾಗಿ ಒಬ್ಬ ಹಿಂದುವಾಗಿ ಪರಿವರ್ತಿತರಾದರು. ಆಯುರ್ವೇದ, ಜ್ಯೋತಿಷ್ಯದ ಅಧ್ಯಯನ ಕೈಗೊಂಡರು. ಭಾರತಕ್ಕೆ ಭೇಟಿಕೊಟ್ಟಾಗ ತಮಗಾದ ಹಲವು ಅನುಭವಗಳನ್ನು, ರೋಮಾಂಚನಗಳನ್ನು ಈ ಪುಸ್ತಕದಲ್ಲಿ ಅವರು ಹಂಚಿಕೊಂಡಿದ್ದಾರೆ.

ಉಪನಿಷತ್ತಿನಲ್ಲಿ ಬರುವ ಪ್ರಕೃತಿ, ದೇವತೆಗಳ ಬಗ್ಗೆ ಗುರುಗಳಿಂದ ಪಡೆದ ಜ್ಞಾನವನ್ನು ಅವರು ವಿವರಿಸುವ ರೀತಿ ಗಮನ ಸೆಳೆಯುತ್ತದೆ. ಹೀಗೆ, ಯಾವುದೇ ವರ್ಣ, ಮತಗಳ ಕಟ್ಟುಪಾಡಿಗೆ ಸೇರದೆ ಜ್ಞಾನವನ್ನರಸುತ್ತಾ ಬಂದ ಇವರು 'ವಾಮದೇವ ಶಾಸ್ತ್ರಿ'ಯಾದರು. (ತಾಯಿಯ ಗರ್ಭದಲ್ಲಿದ್ದಾಗಲೇ ವೇದಗಳನ್ನೆಲ್ಲ ಓದಿದವನು ವಾಮದೇವ ಎಂದು ಐತರೇಯ ಉಪನಿಷತ್ತಿನಲ್ಲಿ ಹೇಳಲಾಗಿದೆ)

ಪುಸ್ತಕದಲ್ಲಿ ಮುಂದಿನ ಚರ್ಚೆ ಭಾರತದ ಇಂದಿನ ಸ್ಥಿತಿ-ಗತಿಯ ಬಗ್ಗೆ. ಕ್ರಿಶ್ಚಿಯನ್ನರು ಪ್ರಾರಂಭಿಕ ಹಂತದಿಂದ ಮಾಡುತ್ತಾ ಬಂದದ್ದು ಮತಪ್ರಚಾರ ಒಂದೇ, ತಮ್ಮದ್ದಲ್ಲದ ಯಾವ ನಂಬಿಕೆಯೂ ಪ್ರಪಂಚದಲ್ಲಿ ಬೆಳೆಯಬಾರದು, ಇರಬಾರದು ಎಂಬ ದುರಾಲೋಚನೆ. ಯಹೂದಿಗಳನ್ನು, ಪೇಗನ್ನರನ್ನೂ ಹಂತಹಂತವಾಗಿ ನಾಶಮಾಡಿ, ಇಡೀ ಗ್ರೀಕ್ ಸಂಸ್ಕೃತಿಯನ್ನು ಹೇಳಹೆಸರಿಲ್ಲದಂತೆ ಮಾಡಿದಂತೆಯೇ ಸೃಜನಶೀಲತೆ, ವೈವಿಧ್ಯತೆಯೇ ಇರದಂತೆ ಮಾಡಿ ಏಕರೂಪತೆಯನ್ನು ತರಲು ಕಂಕಣಬದ್ಧರಾಗಿದ್ದಾರೆ. ಇದರಿಂದ ಜೀವವೈವಿಧ್ಯಕ್ಕೂ, ಪ್ರಾಕೃತಿಕ ಸಮತೋಲನಕ್ಕೂ ಮಾರಕವಾಗಬಹುದು. ಭಾರತದ ಆರ್ಥಿಕ, ಸಾಮಾಜಿಕ ಪರಿಸ್ಥಿತಿಯ ದುರ್ಲಾಭ ಪಡೆಯಲು ಕ್ರೈಸ್ತ ಮಿಷನರಿಗಳು ಪ್ರಯತ್ನಿಸುತ್ತಿದ್ದಾರೆ. ಆರ್ಯರೆಂದರೆ ಸುಸಂಸ್ಕೃತರು ಎಂಬ ವಿಶಾಲ ಅರ್ಥದಲ್ಲಿ ಸ್ವೀಕರಿಸದೆ ದ್ರಾವಿಡರು-ಆರ್ಯರು ಎಂಬ ಜನಾಂಗೀಯ ಸಮಸ್ಯೆಯನ್ನು ಸೃಷ್ಟಿಸಿದ್ದಾರೆ. ಇಂದಿಗೂ ಭಾರತದಲ್ಲಿ ಋಷಿ-ಮುನಿಗಳು ಯಾವುದೋ ಬೆಟ್ಟದಲ್ಲೋ, ಗುಹೆಗಳಲ್ಲೋ ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗಿದ್ದಾರೆ. ಧಾರ್ಮಿಕ ಕೇಂದ್ರ, ಮಠಗಳು ತಮ್ಮದೇ ಪರಿಧಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಹೀಗಾಗಿ ಬಹುಸಂಖ್ಯಾತರನ್ನು ಮುನ್ನಡೆಸುವ ಒಂದು ಬಲವಾದ ದಾರಿದೀಪವಿಲ್ಲದೆ ಉನ್ನತ ಸಂಸ್ಕೃತಿಯೊಂದು ನಾಶದೆಡೆಗೆ ನಡೆಯುತ್ತಿದೆ ಎಂಬುದು ವಾಮದೇವ ಶಾಸ್ತ್ರಿಗಳ ಅಳಲು. ಅವರ ಪ್ರಕಾರ ಇಂದು ಭಾರತಕ್ಕೆ 'ಬೌದ್ಧಿಕ ಕ್ಷತ್ರಿಯ'ರ ಅಗತ್ಯವಿದೆ. ಇತ್ತೀಚಿನ ದಿನಗಳಲ್ಲಿ ಚರ್ಚಿತವಾದ **ಮತಾಂತರದ ಅವಾಂತರ** ಹಲವು ದೃಷ್ಟಿಕೋನಗಳನ್ನು, ಇತಿಹಾಸದ ಬಗೆಗೆ ಹೊಸ ಬೆಳಕನ್ನೂ ಚೆಲ್ಲಿದೆ. ಈ ಸಂದರ್ಭದಲ್ಲಿ 'ವಿಜಯಕರ್ನಾಟಕ'ದಲ್ಲಿ ಪ್ರಕಟಗೊಂಡ ಡೇವಿಡ್ ಫ್ರಾಲಿಯವರ ಲೇಖನವನ್ನು ಸ್ಮರಿಸಿಕೊಳ್ಳಬಹುದು. ಅವರ ಅಭಿಪ್ರಾಯಗಳಿಗೆ ಆಧಾರಸಹಿತ ವಿವರಣೆಯನ್ನು ಈ ಪುಸ್ತಕವು ನೀಡುತ್ತದೆ.

ಹೀಗೆ ಅಮೇರಿಕಾದ ಮೂಲೆಯಿಂದ ಆರಂಭವಾದ ಒಂದು ಅಧ್ಯಾತ್ಮ ಪಯಣ ನಮ್ಮ ಇಂದಿನ ಸಮಸ್ಯೆಗಳವರೆಗೆ ಬಂದು ನಿಂತಿದೆ. **'ಹಿಂದು'** ಪದವನ್ನು ವಿಶಾಲವಾದ ಅರ್ಥದಲ್ಲಿ ಗ್ರಹಿಸಿ ಅನುಸರಿಸುತ್ತಿರುವ ವಾಮದೇವಶಾಸ್ತ್ರಿಯವರ ಸತ್ಯಾನ್ವೇಷಣೆಯ ಪಯಣದ ಸವಿ ಸವಿಯಲು ಒಮ್ಮೆ ಪುಸ್ತಕ ಓದಬೇಕು. ದಾರಿಯಲ್ಲಿ ಸಿಗುವ ರಮಣೀಯ ದೃಶ್ಯಗಳನ್ನು ಕಂಡು ರೋಮಾಂಚನಗೊಳ್ಳಬೇಕು.

ಸಹಪಯಣದ ಆಶಯದೊಂದಿಗೆ 'ಸ್ವಾಗತ' ಆಧ್ಯಾತ್ಮ ಪಯಣಕೆ!!!

| | |
|---|---|
| ಗ್ರಂಥದ ಹೆಸರು | : ನಾ ಹೇಗೆ ಹಿಂದುವಾದೆ |
| ಲೇಖಕರು | : ಡೇವಿಡ್ ಫ್ರಾಲಿ (ವಾಮದೇವ ಶಾಸ್ತ್ರಿ) |
| ಅನುವಾದಕರು | : ಮಂಗಳಾಭಟ್ |
| ಪ್ರಕಾಶಕರು | : ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು |
| ಪ್ರಕಟಣೆಯ ವರ್ಷ | : 2009 |
| ಬೆಲೆ | : 135 ರೂಪಾಯಿಗಳು |

RNI No. KAR KAN /2005/22027 Postal Registration No.KA/RNP/BGS/2041/2008-2010



ಹೆಜ್ಜೆ ಗುರುತು

# ಶಾಲೆಯೊಡನೆ ಒಂದಾದ ವೈಎಫ್ಎಸ್ ಕಾರ್ಯಕರ್ತೆ

ಯೂತ್ ಫಾರ್ ಸೇವಾ (ವೈಎಫ್ಎಸ್) ಬಗ್ಗೆ ನಿಮಗೆಲ್ಲಾ ಗೊತ್ತೇ ಇದೆ. ಯುವಜನತೆಯನ್ನು ಸೇವಾಕಾರ್ಯದಲ್ಲಿ ತೊಡಗಿಸಲು ಪ್ರತಿಷ್ಠಾನವು ಪ್ರಾರಂಭಿಸಿದ ಆಂದೋಲನ ಇದು. ಅನೇಕ ಯುವ ಜನರು ಇದರತ್ತ ಆಕರ್ಷಿತರಾಗಿ ಸೇವಾ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ರಕ್ಷಾ ರಾಮಚಂದ್ರ ಕೂಡಾ ಹಾಗೆಯೇ ಯೂತ್ ಫಾರ್ ಸೇವಾದ ಸಂಪರ್ಕಕ್ಕೆ ಬಂದವರು. ಅವರು ಕಳೆದ 8 ತಿಂಗಳುಗಳಿಂದ ಯೂತ್ ಫಾರ್ ಸೇವಾ ಕಾರ್ಯಕರ್ತೆಯಾಗಿ ಬೆಂಗಳೂರಿನ ಕತ್ರಿಗುಪ್ಪೆ ಸರಕಾರಿ ಶಾಲೆಯ ಜೊತೆ ಜೋಡಿಸಿಕೊಂಡು ಅಲ್ಲಿ ಸೇವಾ ಕಾರ್ಯಗಳನ್ನು ಮಾಡುತ್ತಿದ್ದಾರೆ. ಭ। ರಕ್ಷಾ ಅವರ ಆಫೀಸ್ ಸಮಯ ಮಧ್ಯಾಹ್ನದಿಂದ ರಾತ್ರಿವರೆಗಿನ ಶಿಫ್ಟ್‌ನಲ್ಲಿರುವುದ ರಿಂದ ಪ್ರತಿದಿನ ಬೆಳಿಗ್ಗೆ 9.30ರಿಂದ 11.30ರ ತನಕ 6ನೇ ಮತ್ತು 8ನೇ ತರಗತಿಯ ಮಕ್ಕಳಿಗೆ ಇಂಗ್ಲೀಷ್ ಹಾಗೂ ಗಣಿತ ಪಾಠ ಮಾಡುತ್ತಾರೆ. ಪರೀಕ್ಷೆ ಹತ್ತಿರ ಬಂದಾಗ ಭಾನುವಾರ ಕೂಡಾ ವಿಶೇಷ ತರಗತಿಗಳನ್ನು ತಮ್ಮ ಮನೆಯಲ್ಲೇ ನಡೆಸುತ್ತಾರೆ. ಇವರ ಉತ್ಸಾಹ, ಕಲಿಸುವ ಶೈಲಿಯಿಂದ ಮಕ್ಕಳಲ್ಲಿ ಕಲಿಯುವ ಬಯಕೆ ಹೆಚ್ಚಾಗಿದೆ ಅನ್ನುವುದು ಶಾಲಾ ಮುಖ್ಯೋಪಾಧ್ಯಾಯರ ಅನುಭವ. ಪಠ್ಯಕ್ರಮವಷ್ಟೇ ಅಲ್ಲದೆ, ಮಕ್ಕಳಿಗೆ ನೃತ್ಯ (ಕಂಸಾಲೆ) ಹಾಗೂ ಹಾಸ್ಯ ನಾಟಕವನ್ನೂ ಕಲಿಸಿಕೊಟ್ಟು ಶಾಲೆಯ ಮಕ್ಕಳು 'ಪ್ರತಿಭಾ ಕಾರಂಜಿ' ಸ್ಪರ್ಧೆಯಲ್ಲಿ ಪ್ರಶಸ್ತಿಗಳನ್ನು ಗಳಿಸಿದ್ದಾರೆ. ರಕ್ಷಾ ಅವರ ನಿರ್ದೇಶನದ ಕಂಸಾಲೆ ನೃತ್ಯಕ್ಕೆ ಪ್ರಥಮ ಸ್ಥಾನ ದೊರೆತಿದ್ದು ಈ ಮಕ್ಕಳು ಈಗ ತಾಲ್ಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ!

ಅವರ ಶ್ರದ್ಧೆ, ಸಮರ್ಪಣೆ ಮತ್ತು ಪ್ರತಿಭೆಯನ್ನು ಗುರುತಿಸಿ ಶಾಲೆಯ ಆಡಳಿತ ಮಂಡಳಿಯವರು ರಕ್ಷಾ ಅವರನ್ನು ಶಾಲಾ ಅಭಿವೃದ್ಧಿ ಸಮಿತಿಯ ಅಧ್ಯಕ್ಷೆಯನ್ನಾಗಿ ನೇಮಕ ಮಾಡಿಯೇ ಬಿಟ್ಟರು!! ಹೀಗೆ ಕೇವಲ ಶಾಲೆಯ ಮಕ್ಕಳಿಗೆ ಕಲಿಸುವ ಉದ್ದೇಶವನ್ನಿಟ್ಟುಕೊಂಡು ಹೋದ ಈಕೆಗೆ ದೊಡ್ಡ ಜವಾಬ್ದಾರಿಯೇ ಹೆಗಲ ಮೇಲೇರಿತು. ಖಂಡಿತಾ ಆ ಶಾಲೆ ಇನ್ನೂ ಚೆನ್ನಾಗಿ ಅಭಿವೃದ್ಧಿ ಹೊಂದುವುದರಲ್ಲಿ ಸಂಶಯವಿಲ್ಲ.

ನಮ್ಮೂರಿನಲ್ಲಿ 'ಯೂತ್ ಫಾರ್ ಸೇವಾ' ಯೋಜನೆ ಇಲ್ಲದಿರಬಹುದು. ಆದರೆ, 'ಯೂತ್' ಅಂದರೆ ಯುವಜನರಂತೂ ಇದ್ದೇವಲ್ಲಾ! ಯುವ ಜನರೆಲ್ಲಾ ಸೇರಿ ನಮ್ಮೂರಿನ ಸರ್ಕಾರಿ ಶಾಲೆಗಳ ಕಡೆ ಸ್ವಲ್ಪ ಮುಖ ಮಾಡಿ ಅಲ್ಲಿ ನಾವು ಹೇಗೆ ಭಾಗಿಯಾಗಬಹುದೆಂದು ಚರ್ಚಿಸೋಣ. ನಾವು ಸ್ವಲ್ಪ ಸಮಯ ಕೊಟ್ಟರೆ ಅಲ್ಲಿನ ಮಕ್ಕಳಿಗೇನಾದರೂ ಉಪಯೋಗವಾದೀತೇ? ಯೋಚಿಸೋಣ. ಹಾಗಾದಲ್ಲಿ, ನಮ್ಮ ನಾಳಿನ ಭಾರತ ಬೆಳಗೀತು!

## ರಾಷ್ಟ್ರೀಯ ಸ್ವಯಂ ಸೇವಕ ಸಂಘ, ಕರ್ನಾಟಕ

ಕೇಶವಕೃಪ, 74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು– 560 004

## ಸಮಾಜದ ಬಾಂಧವರಲ್ಲಿ ಮನವಿ

ಉತ್ತರ ಕರ್ನಾಟಕದ ಅನೇಕ ಜಿಲ್ಲೆಗಳು ಪ್ರವಾಹದಿಂದ ನಲುಗಿ ಹೋಗಿದೆ. ನಿಲ್ಲದ ಮಳೆ, ಉಕ್ಕಿ ಹರಿಯುವ ನದಿಗಳಿಂದಾಗಿ ಸಾವಿರಾರು ಗ್ರಾಮಗಳು ಜಲಾವೃತವಾಗಿವೆ. ದೊಡ್ಡ ಪ್ರಮಾಣದಲ್ಲಿ ಮನೆಗಳು ಕುಸಿದು ಲಕ್ಷಾಂತರ ಜನ ನಿರ್ವಸಿತರಾಗಿದ್ದಾರೆ.

'ರಾಷ್ಟ್ರೀಯ ಸ್ವಯಂಸೇವಕ ಸಂಘ'ದ ಸಾವಿರಾರು ಕಾರ್ಯಕರ್ತರು ಎಂದಿನಂತೆಯೇ ಪ್ರವಾಹ ಪೀಡಿತರಿಗೆ ನೆರವಾಗಲು ಧಾವಿಸಿದ್ದಾರೆ. ಜಲಾವೃತ ಪ್ರದೇಶಗಳಿಂದ ಜನರನ್ನು ಸುರಕ್ಷಿತ ಸ್ಥಳಗಳಿಗೆ ಸಾಗಿಸುವ, ಆಹಾರ, ವಸತಿ ಒದಗಿಸುವ ತುರ್ತುಕಾರ್ಯಗಳು ಪ್ರಾರಂಭವಾಗಿವೆ. ಬೆಳಗಾವಿ, ರಾಯಚೂರಿನಲ್ಲಿ ವೈದ್ಯಕೀಯ ನೆರವು, ಸಹಸ್ರಾರು ನಿರಾಶ್ರಿತರಿಗೆ ಆಹಾರ ಪೊಟ್ಟಣ ವಿತರಿಸಲಾಗಿದೆ. ಹೊಳೆಆಲೂರು, ಬಾದಾಮಿ, ಕೊಪ್ಪಳ, ಗದಗ ಪ್ರದೇಶದ ನೂರಾರು ಹಳ್ಳಿಗಳ ಸಂತ್ರಸ್ತರಿಗೆ ನಿರಾಶ್ರಿತ ಶಿಬಿರ ಹಾಗೂ ಗಂಜಿಕೇಂದ್ರ ಆರಂಭಿಸಲಾಗಿದೆ. ವಿಜಾಪುರ, ಬೆಳಗಾವಿ, ಬಾಗಲಕೋಟೆ ಸುತ್ತ ನಿರ್ವಸಿತರಿಗಾಗಿ ಪರಿಹಾರ ಶಿಬಿರ ತೆರೆಯಲಾಗುತ್ತಿದೆ.

ಇನ್ನೂ ನೂರಾರು ಕಡೆಗಳಲ್ಲಿ ಪರಿಹಾರ ಕಾರ್ಯದ ಅವಶ್ಯಕತೆಯಿದೆ. 50 ಲಕ್ಷಕ್ಕೂ ಮಿಕ್ಕ ನೊಂದಜೀವಗಳಿಗೆ ಸಾವಿರಾರು ನೆರವಿನ ಕೈಗಳ ಅಗತ್ಯವಿದೆ. ಬನ್ನಿ ನಮ್ಮೊಂದಿಗೆ ಕೈಜೋಡಿಸಿ, ನಿಮ್ಮ ಕಳಕಳಿಯ ಧನಸಹಾಯವನ್ನು ನಮಗೆ ತಲುಪಿಸಿ. ನಿಮ್ಮ ನೆರವನ್ನು ರಗ್ಗು, ಕಂಬಳಿ, ಬೆಡ್‌ಶೀಟ್‌ಗಳ ಮೂಲಕವೂ ನೀಡಬಹುದು.

ಚೆಕ್/ಡಿಡಿ ಗಳನ್ನು ಆರ್‌ಎಸ್‌ಎಸ್ ಸಂಚಾಲಿತ ಸಂತ್ರಸ್ತ ಪರಿಹಾರ ನಿಧಿ ಹೆಸರಿಗೆ ನೀಡಿ, (ಬ್ಯಾಂಕ್ ಖಾತೆ ನಂ. 0789101009327, ಕೆನರಾ ಬ್ಯಾಂಕ್, ಕೆಂಪೇಗೌಡ ನಗರ ಶಾಖೆ, ಬೆಂಗಳೂರು)

ಇದಕ್ಕೆ 80ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

**ತಲುಪಿಸಬೇಕಾದ ವಿಳಾಸ :**

ಕೇಶವಕೃಪ, 74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004
ದೂರವಾಣಿ : 09480582027
080–26610760 / 26610081

ಕಲಿಯುಗಾಬ್ದ 5111, ಶ್ರೀ ವಿರೋಧಿ ಸಂವತ್ಸರ, ಅಕ್ಟೋಬರ್ 2009

ನಿಮ್ಮ ಉದಾರ ನೆರವಿನ ನಿರೀಕ್ಷೆಯಲ್ಲಿ,
**ಮ. ವೆಂಕಟರಾಮು. ಡಾ. ಖಗೇಶನ್ ಪಟ್ಟಣ ಶೆಟ್ಟಿ**

**Postal Registration No. KA/RNP/BGS/2041/2008-2010**
**RNI No. KAR KAN /2005/22027**
Office of Posting : Basavanagudi H.P.O.,BG-4. 15th of every month

**SEWA DISHA**
**ಸೇವಾ ದಿಶಾ**
ಅಕ್ಟೋಬರ್ – 2009

**ಇವರಿಗೆ,**

Printed, Published, Owned by **K S Nagabhushan** and Printed at **Rashtrotthana Mudranalaya**, K. G. Nagar, Bangalore - 560 019 and Published at **Ajithasri,** 8/28, Basavanagudi Road, Bangalore - 560 004. Editor : **Radhakrishna Holla S L** **Website :** www.hinduseva.org